ಸಂಪುಟ : 8 ಸಂಚಿಕೆ : 232 ಪುಟ : 4 ಬೆಲೆ : 3.00 ಶುಕ್ರವಾರ ಅಕ್ಟೋಬರ್ 20, 2023 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್ ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 8 Issue : 232 Pages : 4 Price : 3.00 Friday October 20, 2023 Gadag RNI No: KARKAN/2015/63412 E-mail: vijayasakshidaily@gmail.com Post Regn.No: GDG/72/2023-25

### ಜಮೀನೊಂದರಲ್ಲಿ ಕಬ್ಬಿಣದ ಅದಿರಿನ ಅಕ್ರಮ ಸಂಗ್ರಹ । ತಹಸೀಲ್ದಾರ ನೇತೃತ್ವದಲ್ಲಿ ದಾಳಿ

# ತೆರೆಮರೆಯಲ್ಲಿ ಚಿಗುರಿತಾ ಅಕ್ರಮ ಅದಿರು ದಂಧೆ?













**■ ವಿಜಯಸಾಕ್ಷಿ ಸುದ್ದಿ, ಗದಗ**

ಗದಗ ಜಿಲ್ಲೆ ಸಾಹಿತ್ಯ, ಸಂಸ್ಕೃತಿ, ಶಿಕ್ಷಣ ಹೀಗೆ ಅನೇಕ ಕ್ಷೇತ್ರಗಳಲ್ಲಿ ಸಂಪದ್ಭರಿತವಾಗಿದೆ. ಪ್ರಾಕೃತಿಕವಾಗಿಯೂ ಬೆಲೆಕಟ್ಟಲಾಗದ ಪಂಚ ಖನಿಜ ಸಂಪತ್ತು ಹೊಂದಿದೆ. ಇಲ್ಲಿನ ಪ್ರಾಕೃತಿಕ ಸಂಪತ್ತಿಗೆ ಬೆಲೆ ಕಟ್ಟಲೂ ಆಗದು. ಇದೇ ಉದ್ದೇಶದಿಂದ ಅಕ್ರಮ ದಂಧೆಕೋರರ ಕಣ್ಣು ಎಂದಿಗೂ ಗದಗ ಜಿಲ್ಲೆಯ ಮೇಲಿದೆ. ಈ ಹಿಂದೆಯೂ ಗದಗ ತಾಲೂಕಿನ ಹಲವು ಗುಡ್ಡಗಾಡು ಪ್ರದೇಶದಲ್ಲಿ ಅಕ್ರಮ ಕಬ್ಬಿಣದ ಅದಿರು ಬಗೆದು ಮಾರಿ, ಅದೆಷ್ಟೋ ಕುಳಗಳು ಕೋಟ್ಯಾಧೀಶರಾಗಿದ್ದಾರೆ. ಅಂದು ದೊಡ್ಡ ದೊಡ್ಡ ಗಣಿ ಕುಳಗಳು ಜೈಲು ಸೇರಿದ ಬಳಿಕ ಸಣ್ಣಪುಟ್ಟ ದಂಧೆಕೋರರು ಸುಮ್ಮನಾಗಿದ್ದರು. ಆದರೆ, ಈಗ ಮತ್ತೆ ಸದ್ದಿಲ್ಲದೇ ಚಿಗುರತೊಡಗಿದ್ದಾರೆ.

ಈ ವಿಚಾರಕ್ಕೆ ಸಂಬಂಧಿಸಿ, ಕಂದಾಯ ಇಲಾಖೆಯ ಅಧಿಕಾರಿಗಳು ಗ್ರಾಮಸ್ಥರ ದೂರಿನ ಆಧಾರದಲ್ಲಿ ಅಕ್ರಮ ಕಬ್ಬಿಣದ ಅದಿರು ಸಂಗ್ರಹ ಅಡ್ಡೆ ಮೇಲೆ ದಾಳಿ ಮಾಡಿದ್ದು, ಅಪಾರ ಪ್ರಮಾಣದ ಕಬ್ಬಿಣದ ಅದಿರು ವಶಕ್ಕೆ ಪಡೆದುಕೊಂಡಿದ್ದಾರೆ.

ಗದಗ ತಾಲೂಕಿನ ದುಂದೂರು ಗ್ರಾಮದ ಸಮೀಪದ ಜಮಿನೊಂದರಲ್ಲಿ ಅಕ್ರಮವಾಗಿ ಕಬ್ಬಿಣದ ಅದಿರು ಸಂಗ್ರಹಿಸಲಾಗಿದೆ ಎಂಬ ಖಚಿತ ಮಾಹಿತಿಯ ಮೇರೆಗೆ ತಹಸೀಲ್ದಾರ ನೇತೃತ್ವದಲ್ಲಿ ದಾಳಿ ನಡೆಸಿ, ಅಕ್ರಮವಾಗಿ ಸಂಗ್ರಹಿಸಿದ್ದ ಅದಿರು ಸಂಪತ್ತನ್ನು ವಶಕ್ಕೆ ಪಡೆದಿದ್ದಾರೆ.

ರಾತ್ರೋರಾತ್ರಿ ಗುಡ್ಡಗಳನ್ನು ಅಗೆದು, ಹೆದ್ದಾರಿಯ ಪಕ್ಕದಲ್ಲಿಯೇ ಇರುವ ರೈತರ ಜಮೀನುಗಳಲ್ಲಿ ಅಕ್ರಮವಾಗಿ ಅದಿರು ಸಂಗ್ರಹ ಮಾಡುತ್ತಿದ್ದಾರೆ ಎನ್ನಲಾಗಿದೆ.

ಇಲ್ಲಿಂದಲೇ ಕಬ್ಬಿಣದ ಅದಿರನ್ನು ಗ್ರೇಡಿಂಗ್ ಮಾಡಿ, ಸಾಗಾಟ ಮಾಡಲು ತಯಾರಿ ನಡೆಸಿದ್ದಾರೆ ಎಂಬ ಕುರಿತು ಗದಗ ಜಿಲ್ಲಾಡಳಿತಕ್ಕೆ ಸ್ಥಳೀಯರು ಮಾಹಿತಿ ನೀಡಿದ ಹಿನ್ನೆಲೆಯಲ್ಲಿ, ಗದಗ ತಹಸೀಲ್ದಾರ ಶ್ರೀನಿವಾಸಮೂರ್ತಿ ನೇತೃತ್ವದಲ್ಲಿ ದಾಳಿ ಮಾಡಿ, ಅಪಾರ ಪ್ರಮಾಣದಲ್ಲಿ ಸಂಗ್ರಹಿಸಲಾಗಿದ್ದ ಕಬ್ಬಿಣದ ಅದಿರಿನ ಅಕ್ರಮ ಸಂಗ್ರಹವನ್ನು ವಶಕ್ಕೆ ಪಡೆದಿದ್ದಾರೆ.

ದುಂದೂರಿನ ಸರ್ವೆ ನಂ. 35/1+2ಬಿನಲ್ಲಿ ಸುಮಾರು 201 ಕ್ಯೂಬಿಕ್ ಮೀಟರ್‌ನಷ್ಟು ಅಕ್ರಮ ಕಬ್ಬಿಣದ ಅದಿರು ಸಂಗ್ರಹ ಮಾಡಿರುವುದು ಕಂಡುಬಂದಿದ್ದು, ಎಲ್ಲವನ್ನೂ ವಶಕ್ಕೆ ಪಡೆಯಲಾಗಿದೆ. ಉಮರ ಬಬ್ಲು ಎಂಬ ವ್ಯಕ್ತಿಯೊಬ್ಬರು ಅಕ್ರಮ ಕಬ್ಬಿಣ ಅದಿರು ಸಂಗ್ರಹ ಮಾಡಿದ್ದು ತಿಳಿದು ಬಂದಿದೆ ಎಂದು ತಹಸೀಲ್ದಾರರು ಮಾಹಿತಿ ನೀಡಿದ್ದಾರೆ.

ಈ ಜಮೀನಿನಲ್ಲಿ ಸಂಗ್ರಹಿಸಿದ್ದ ಕಬ್ಬಿಣದ ಅದಿರಿನ ಮಾದರಿಯನ್ನು ಪರೀಕ್ಷೆಗಾಗಿ ಲ್ಯಾಬ್‌ಗೆ ಕಳಿಸಲಾಗಿದ್ದು, ಈ ಕುರಿತು ನ್ಯಾಯಾಲಯದಲ್ಲಿ ದೂರು ದಾಖಲಿಸಲಾಗಿದೆ ಎನ್ನಲಾಗಿದೆ.

> ಕಣ್ಣೆದುರೇ ಇಷ್ಟೆಲ್ಲಾ ನಡೆಯುತ್ತಿದ್ದರೂ ಗಣಿ ಇಲಾಖೆಯ ಅಧಿಕಾರಿಗಳು ಅದ್ಯಾಕೋ ದಂಧೆ-ಕೋರರ ಉಸಾಬರಿಗೆ ಹೋಗುತ್ತಿಲ್ಲ ಎಂಬ ಆರೋಪ ಕೇಳಿ ಬಂದಿದೆ. ಗದಗ ತಾಲೂಕು ಸೇರಿದಂತೆ ಜಿಲ್ಲೆಯ ಹಲವು ಗುಡ್ಡಗಳಲ್ಲಿ ಕಬ್ಬಿಣದ ಅದಿರು ಯಥೇಚ್ಛವಾಗಿದೆ.
>
> ಹೀಗಿರುವಾಗ, ಅಲ್ಲಿಂದಲೂ ರಾತ್ರೋರಾತ್ರಿ ಗಣಿಗಾರಿಕೆ ನಡೆಸಿ, ಇಲ್ಲಿ ತಂದು ಸಂಗ್ರಹಿಸಿ ಗ್ರೇಡಿಂಗ್ ಮಾಡುತ್ತಿದ್ದಾರೆ ಎಂಬ ಅನುಮಾನಗಳೂ ಸಾರ್ವಜನಿಕರಲ್ಲಿ ವ್ಯಕ್ತವಾಗಿದೆ. ಗಣಿ ಇಲಾಖೆಗೆ ಸ್ಥಳೀಯರು ಮಾಹಿತಿ ನೀಡಿದ್ದರೂ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ ಎಂಬುದು ಹೆಸರು ಹೇಳಲಿಚ್ಛಿಸದ ಗ್ರಾಮಸ್ಥರೊಬ್ಬರು ಆತಂಕ ವ್ಯಕ್ತಪಡಿಸಿದ್ದಾರೆ.

## ಗದಗ-ಬೆಟಗೇರಿ ಅವಳಿ ನಗರದಲ್ಲಿ ಇಂದು ನೀರು ಪೂರೈಕೆ ಎಲ್ಲೆಲ್ಲಿ?



**■ ವಿಜಯಸಾಕ್ಷಿ ಸುದ್ದಿ, ಗದಗ**

ಗದಗ ಬೆಟಗೇರಿ ಅವಳಿ ನಗರದಲ್ಲಿ ಅಕ್ಟೋಬರ್ 20 ರಂದು ಈ ಕೆಳಗಿನ ಸ್ಥಳಗಳಿಗೆ ನೀರು ಪೂರೈಕೆ ಮಾಡಲಾಗುವುದು. **ಸ್ಥಳಗಳ ವಿವರ:** ವಾರ್ಡ್ ನಂ. 30ರಲ್ಲಿ ಸಂಕಣ್ಣವರ್ ಲೇಔಟ್, ಎಸ್ಪಿ ಆಫೀಸ್ ಲೈನ್, ಪುಟ್ಟರಾಜನಗರ, ವಾರ್ಡ್ ನಂ. 27 ವೀರನಾರಾಯಣ ಬಡಾವಣೆ, ಕೆಎಚ್ ಪಾಟೀಲ್ ಬಡಾವಣೆಯ ಕೆಲವು ಉಳಿದ ಭಾಗಗಳು, ವಾರ್ಡ್ ನಂ. 1 ಎಸ್.ಎಂ ಕೃಷ್ಣ ನಗರ ಮೇಲಿನ ಭಾಗ ಕೆಳಗಿನ ಭಾಗಗಳು, ವಾರ್ಡ್ ನಂ. 16 ಡಿಸಿ ಮಿಲ್ ರೋಡ್, ಡೋರ್‌ಗಲ್ಲಿ, ವಾರ್ಡ್ ನಂ. 11, 12 ಇರಾನಿ ಕಾಲೋನಿ, ಕರಿಯಮ್ಮನ ಕಲ್ಲು, ಕಾಶಿನಾಥನಗರ, ಸಾಯಿಬಾಬಾ ಗುಡಿ, ಗಣಪತಿ ಗುಡಿ, ಹನುಮಂತ ದೇವರ ಗುಡಿ ಲೈನ್, ಅಬ್ದುಲ್ ಕಲಾಂ ಲೈನ್, ಶಿವಾನಂದ ಗಾರ್ಡನ್, ಟಿ ಆ್ಯಂಡ್ ಕ್ವಾರ್ಟರ್ಸ್ ಹಿಂದಿನ ಭಾಗ, ರಾಘವೇಂದ್ರ ಗುಡಿ ಲೈನ್, ಮಸೂತಿ, ವಾರ್ಡ್ ನಂ. 35, 34, 30ರಲ್ಲಿ 1ನೇ ಕ್ರಾಸ್, ದೊಡ್ಮನಿ ಸರ್ ಲೈನ್, ಡಿಪೋ ಹಿಂದಿನ ಭಾಗ, ರೇಣಕ್ಕನವರ ಲೈನ್, ಮಹಾಕಾಳಿ ಗುಡಿ ಲೈನ್, ಈಶ್ವರ್ ಗುಡಿ ಲೈನ್, ಓಂ ಶಾಂತಿ, ಸಚ್ಚಿದಾನಂದ ಮಠ ಲೈನ್, ಪಿಡಬ್ಲ್ಯೂಎಸ್ ಲೈನ್, ಹನುಮಂತ ದೇವರ ಗುಡಿಯ ಸುತ್ತಮುತ್ತಲಿನ ಲೈನ್ 2ನೇ ಕ್ರಾಸ್, ಮೂರನೇ ಕ್ರಾಸ್, ಗಣಪತಿ ಗುಡಿ ಲೈನ್, ಆದರ್ಶ ನಗರ, ಹೋಲಿ ಅವರ ಲೈನ್, ವಾರ್ಡ್ ನಂ. 28ರಲ್ಲಿ ಕೊರ್ಲಳ್ಳಿ ಮಾಸ್ತರ್ ಲೈನ್, ಅಬ್ಬಿಗೇರಿ ಲೈನ್, ಆಶ್ರಮ ಮುಂದಿನ ಭಾಗ, ಕೃಷ್ಣ ಮಿಷನ್ ಅಪಾರ್ಟ್‌ಮೆಂಟ್, ಎಸ್ ಎಸ್ ಪಾಟೀಲ್ ಕಟ್ಟಿ ಮಾಸ್ತರ್ ಲೈನ್

ತಾಂತ್ರಿಕವಾಗಿ ನೀರು ಪೂರೈಕೆಯಲ್ಲಿ ಒಂದು ವೇಳೆ ಅಡತಡೆಯಾದಲ್ಲಿ ಸಾರ್ವಜನಿಕರು ನಗರಸಭೆಯೊಂದಿಗೆ ಸಹಕರಿಸಬೇಕೆಂದು ಗದಗ ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನಾಳೆ ವಿದ್ಯುತ್ ಅದಾಲತ್

**■ ವಿಜಯಸಾಕ್ಷಿ ಸುದ್ದಿ, ಗದಗ**

ಜಿಲ್ಲೆಯ ಶಹರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿನ ವಿದ್ಯುತ್ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಪ್ರತಿ ತಿಂಗಳ 3ನೇ ಶನಿವಾರ ಸಹಾಯಕ ಕಾರ್ಯಪಾಲಕ ಅಭಿಯಂತರರು, ಗದಗ ಶಹರ/ಗದಗ ಗ್ರಾಮೀಣ, ಮುಂಡರಗಿ ಹಾಗೂ ಲಕ್ಷ್ಮೇಶ್ವರ ಕಾರ್ಯ ಮತ್ತು ಪಾಲನೆ ಉಪವಿಭಾಗಗಳಲ್ಲಿ ವಿದ್ಯುತ್ ಅದಾಲತ್ ನಡೆಸುವ ಮೂಲಕ ಸ್ಥಳದಲ್ಲಿಯೇ ಗ್ರಾಹಕರ ಸಮಸ್ಯೆಗಳಿಗೆ ಪರಿಹಾರ ನೀಡಲು ಕ್ರಮ ವಹಿಸಲು ಸರ್ಕಾರವು ಆದೇಶಿಸಿರುವ ಪ್ರಯುಕ್ತ ಅ.21 ರಂದು ವಿದ್ಯುತ್ ಅದಾಲತ್ ನಡೆಸಲಾಗುವುದು.

ಆದ್ದರಿಂದ ಸಾರ್ವಜನಿಕರು ಈ ಪ್ರಕಟನೆಯನ್ನು ಗಮನಿಸಿ ತಮ್ಮ ವಿದ್ಯುತ್ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಂತೆ ಪ್ರಕಟಣೆಯಲ್ಲಿ ಕೋರಲಾಗಿದೆ.

### ಏಳು ಬಾಗಿಲು ಇರಬಾರದೆಂದು ಹೊಸ ಬಾಗಿಲು ಸೃಷ್ಟಿ । ಸದಸ್ಯರ ಒಪ್ಪಿಗೆ ಇಲ್ಲದೆ ಬದಲಾವಣೆ ಆರೋಪ

# ಪಂಚಾಯಿತಿ ಕಟ್ಟಡವನ್ನು ಕಾಡಿದ 'ವಾಸ್ತು ಪ್ರಕಾರ'!

**■ ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ವಾಸ್ತು ಪ್ರಕಾರದ ಹೆಸರಿನಲ್ಲಿ ಪಂಚಾಯಿತಿ ಕಟ್ಟಡದಲ್ಲಿ ಮತ್ತೊಂದು ಹೊಸ ಬಾಗಿಲು ಸೃಷ್ಟಿ ಮಾಡಿರುವ ಸಮೀಪದ ಸೂರಣಗಿ ಗ್ರಾ.ಪಂ, ಇದೀಗ ಇದು ವಾಸ್ತು ವಿಚಾರಕ್ಕೆ ಸಂಬಂದಿಸಿದ್ದಲ್ಲ, ಪಂಚಾಯಿತಿ ಕೆಲಸಕ್ಕೆ ಆಗಮಿಸುವವರಿಗೆ ಅನೂಕೂಲವಾಗಲಿ ಎನ್ನುವ ದೃಷ್ಟಿಯಿಂದ ಬದಲಾವಣೆ ಮಾಡಲಾಗಿದೆ ಎನ್ನುವ ಉತ್ತರಗಳನ್ನು ಹೇಳುತ್ತಿರುವುದರಿಂದ, ಇದರಲ್ಲಿ ವಾಸ್ತವ ಯಾವುದು ಎನ್ನುವ ಪ್ರಶ್ನೆ ಗ್ರಾಮಸ್ಥರಲ್ಲಿ ಕಾಡುವಂತಾಗಿದೆ.




ಸೂರಣಗಿ ಗ್ರಾ.ಪಂ ಕಟ್ಟಡ 1966ರಲ್ಲಿ ನಿರ್ಮಾಣವಾಗಿದ್ದು, ಇಲ್ಲಿಯವರೆಗೆ ಇಲ್ಲದ ವಾಸ್ತು ವಿಚಾರ ಇದೀಗ ತಲೆ ಎತ್ತಿರುವದು ವಿಚಿತ್ರವಾಗಿದೆ. ಸುಮಾರು 55 ವರ್ಷ ಹಳೆಯದಾದ ಈ ಕಟ್ಟಡ 7 ಬಾಗಿಲುಗಳನ್ನು ಹೊಂದಿತ್ತು. ಈ ಹಿಂದಿನ ಆಡಳಿತ ಮಂಡಳಿಯವರು 7 ಬಾಗಿಲು ಇದೆ ಎಂಬ ಕಾರಣಕ್ಕೆ ಒಂದು ಬಾಗಿಲು ಬೀಗ ಹಾಕಿ, ಬಾಗಿಲ ಹಿಂದೆ ಕಪಾಟು ಮಾಡಿಸಿದ್ದರು. ಪ್ರಸ್ತುತ ಅಧ್ಯಕ್ಷರು ಹಾಗೂ ಕೆಲ ಸದಸ್ಯರು ಒಂದು ಹೊಸ ಬಾಗಿಲು ಸೃಷ್ಟಿ ಮಾಡಿದ್ದು, ಇದಕ್ಕೆ ಎಲ್ಲಾ ಸದಸ್ಯರ ಒಪ್ಪಿಗೆ ಪಡೆದಿಲ್ಲ ಎಂಬ ಆರೋಪ ಕೇಳಿಬರುತ್ತಿದೆ.

ತಾಲೂಕಿನಲ್ಲಿ ಅನೇಕ ಪಂಚಾಯಿತಿಗಳು ಸ್ವಂತ ಕಟ್ಟಡ ಇಲ್ಲದೇ ಬೇರೆ ಬೇರೆ ಕಟ್ಟಡಗಳಲ್ಲಿ ಆಡಳಿತ ನಿರ್ವಹಣೆ ಮಾಡುತ್ತಿವೆ. ಅದಲ್ಲದೆ ಲಕ್ಷ್ಮೇಶ್ವರ ತಾ.ಪಂ ಸಹ ಸ್ವಂತ ಕಟ್ಟಡ ಹೊಂದಿಲ್ಲ. ಹೀಗಿರುವಾಗ 'ವಾಸ್ತು ಪ್ರಕಾರ' ಎನ್ನುವ ಕಾರಣಕ್ಕೆ ಕಟ್ಟಡದಲ್ಲಿ ಬದಲಾವಣೆ ಏಕೆ ಎನ್ನುವದು ಗ್ರಾಮಸ್ಥರ ಪ್ರಶ್ನೆಯಾಗಿದೆ.

99 ಸಾವಿರ ರೂ ಖರ್ಚು ಮಾಡಿಸಲಾಗಿದ್ದು, ಬಾಗಿಲು, ಬಣ್ಣ, ವಿದ್ಯುತ್ ರಿಪೇರಿ, ▸▸ 3ನೇ ಪುಟಕ್ಕೆ

> 15ನೇ ಹಣಕಾಸು ಯೋಜನೆಯಲ್ಲಿ ಪಂಚಾಯಿತಿ ಕಟ್ಟಡ ದುರಸ್ತಿ ಕಾಮಗಾರಿ ಮಾಡಲಾಗುತ್ತಿದೆ. ಒಂದು ಮನೆ ನಿರ್ಮಾಣವಾಗಬೇಕಾಗದರೆ ವಾಸ್ತು ನೋಡುತ್ತೇವೆ. ಅದರಂತೆ ಆಡಳಿತ ಮಾಡುವ ನಮಗೆ ಗ್ರಾ.ಪಂ ಕಟ್ಟಡದಲ್ಲಿ ಏಳು ಬಾಗಿಲು ಇರಬಾರದು, ಏಳು-ಬೀಳು ಎನ್ನುವುದು ಆಗಬಾರದು ಎಂದು ಇನ್ನೊಂದು ಬಾಗಿಲು ತೆರೆಯಲಾಗಿದೆ. ಇದಕ್ಕೆ ಸದಸ್ಯರ ಒಪ್ಪಿಗೆ ಇದೆ.
>
> **– ಪ್ರವೀಣ ಸೂರಣಗಿ.**
>
> ಗ್ರಾಮ ಪಂಚಾಯಿತಿ ಸದಸ್ಯ.

## ಪುರಾಣ, ಪ್ರವಚನಗಳು ಸುಜ್ಞಾನದ ಸಂಕೇತ



**■ ವಿಜಯಸಾಕ್ಷಿ ಸುದ್ದಿ, ಗದಗ**

ಮನುಷ್ಯ ತನ್ನಲ್ಲಿರುವ ಅರಿಷಡ್ವರ್ಗಗಳನ್ನು ಮೆಟ್ಟಿ, ಅವುಗಳಿಂದ ದೂರವಿದ್ದು ಆದರ್ಶ ಗುಣಗಳನ್ನು ಮೈಗೂಡಿಸಿಕೊಂಡು ಅಜ್ಞಾನ ಅಳಿದು, ಸುಜ್ಞಾನ ಪಡೆದುಕೊಂಡು ಕಾಯಕ ಯೋಗಿಗಳಾಗಿ ದಾನ-ಧರ್ಮಗಳನ್ನು ಮಾಡುತ್ತ ಜೀವನ ಸಾಗಿಸಿದಾಗ ಮಾತ್ರ ಜೀವನ ಸಾರ್ಥಕಗೊಳ್ಳುತ್ತದೆ ಎಂದು ಕಳಸಾಪೂರದ ಓಂಕಾರೇಶ್ವರ ಹಿರೇಮಠದ ಪೂಜ್ಯ ಫಕ್ಕೀರೇಶ್ವರ ಮಹಾಸ್ವಾಮಿಗಳು ತಿಳಿಸಿದರು.

ಅವರು ಅಮರೇಶ್ವರ ನಗರದಲ್ಲಿ ದಸರಾ ಹಬ್ಬದ ಪ್ರಯುಕ್ತ ಏರ್ಪಡಿಸಿದ್ದ ಶ್ರೀದೇವಿ ಮಹಾಪುರಾಣದ 4ನೇ ದಿನದ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಅಧ್ಯಕ್ಷತೆ ವಹಿಸಿದ್ದ ಸಿದ್ದು ಪಲ್ಲೇದ ಮಾತನಾಡಿ, ಪಾಲಕರು ಮಕ್ಕಳಿಗೆ ಎಲ್ಲ ರೀತಿಯಿಂದ ಪ್ರೋತ್ಸಾಹ ನೀಡಿ ಧಾರ್ಮಿಕ ಮನೋಭಾವನೆಯನ್ನು ಬೆಳೆಸಬೇಕೆಂದು ಕರೆ ನೀಡಿದರು.

ಸಮ್ಮುಖವನ್ನು ಬಾಗಲಕೋಟೆಯ ಲಡ್ಡು ತಾತನವರು ವಹಿಸಿದ್ದರು. ಸುವರ್ಣಾ ನಾಲ್ವಾಡ ಅವರು ಶ್ರೀದೇವಿಯ ಪಾತ್ರವನ್ನು ನಿರ್ವಹಿಸಿದರು. ಚಿಕ್ಕ ಮಕ್ಕಳು ದೇವತೆಗಳ ಪಾತ್ರದ ಮೂಲಕ ಸಭಿಕರನ್ನು ರಂಜಿಸಿದರು. ಶೋಭಾ ದುರಗಣ್ಣವರ ಹಾಗೂ ಸಂಗಡಿಗರು ಪ್ರಾರ್ಥಿಸಿದರು. ಪ್ರೊ ಬಿ.ಬಿ ಪಾಟೀಲ ಸ್ವಾಗತಿಸಿದರು. ಪ್ರೊ. ಜಿ.ಎಂ ಗುರುಮಠ ನಿರೂಪಿಸಿದರು. ಕಾರ್ಯಕ್ರಮದಲ್ಲಿ ಗೌರವಾಧ್ಯಕ್ಷ ಡಿ.ಎಸ್ ದುರಗಣ್ಣವರ, ನ್ಯಾಯವಾದಿ ಶ್ರೀಕಾಂತ ದೊಡ್ಡಮನಿ, ಎಂ.ಎ ಸಂಗನಾಳ, ಚಂದ್ರಶೇಖರ ಗೊಲ್ಲರ, ಗುರುನಾಥ ಹೊಸಮನಿ, ಲಲಿತಾಂಬಾ ಟ್ರಸ್ಟಿನ ಸರ್ವ ಸದಸ್ಯರು ಹಾಗೂ ಅಮರೇಶ್ವರ ನಗರದ ಗುರುಹಿರಿಯರು ಉಪಸ್ಥಿತರಿದ್ದರು. ಪ್ರಸಾದ ಸೇವೆಯನ್ನು ಈಶ್ವರ ಹಿರೇಮಠ ಹಾಗೂ ನಿವೃತ್ತ ತಹಸೀಲ್ದಾರ ಮ್ಯಾಗೇರಿ ವಹಿಸಿಕೊಂಡಿದ್ದರು.

## ಬಿಜೆಪಿ ಷಡ್ಯಂತ್ರಕ್ಕೆ ನ್ಯಾಯಾಲಯ, ನನ್ನ ಆಸ್ತಿ ಪಟ್ಟಿ ಉತ್ತರ ಕೊಡುತ್ತದೆ

**■ ವಿಜಯಸಾಕ್ಷಿ ಸುದ್ದಿ, ಬೆಂಗಳೂರು**

ಬಿಜೆಪಿಯವರ ಷಡ್ಯಂತ್ರ ಏನೇ ಇರಬಹುದು, ನ್ಯಾಯಾಲಯ ಮತ್ತು ನನ್ನ ಆಸ್ತಿ ಪಟ್ಟಿ ಎಲ್ಲಾ ಉತ್ತರ ಕೊಡುತ್ತದೆ ಎಂದು ಡಿಸಿಎಂ ಡಿ.ಕೆ ಶಿವಕುಮಾರ್ ವಿಪಕ್ಷಗಳಿಗೆ ತಿರುಗೇಟು ನೀಡಿದ್ದಾರೆ.



ಅಕ್ರಮ ಆಸ್ತಿ ಗಳಿಕೆ ವಿಚಾರವಾಗಿ ಸಿಬಿಐ ತನಿಖೆ ನಡೆಸಲು ಹೈಕೋರ್ಟ್ ಅನುಮತಿ ನೀಡಿರುವ ಬಗ್ಗೆ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಶೇ 90ರಷ್ಟು ತನಿಖೆ ನಡೆಸಿದ್ದೇವೆ ಎಂದು ಸಿಬಿಐ ಹೇಳಿದೆ. ನಾನು, ನನ್ನ ಹೆಂಡತಿ ಹಾಗೂ ಕುಟುಂಬದವರು ನನ್ನ ಆಸ್ತಿ ಯಾವುದು, ನನ್ನ ಹೆಂಡತಿಯ ಆಸ್ತಿ ಯಾವುದು ಎಂದು ಹೇಳಬೇಕು.

ನನ್ನನ್ನೇ ಕರೆಸದೆ, ಕೇಳದೆ ಅದು ಹೇಗೆ ಶೇ 90ರಷ್ಟು ತನಿಖೆ ಮಾಡಿದರೋ ಗೊತ್ತಿಲ್ಲ ಎಂದರು.

ನಾವು ನ್ಯಾಯಾಲಯಕ್ಕೆ ಸಿಬಿಐ ದಾಖಲಿಸಿರುವ ಎಫ್‌ಐಆರ್ ಸರಿ ಇಲ್ಲ ಎಂದು ಮೇಲ್ಮನವಿ ಸಲ್ಲಿಸಿದ್ದೆವು. ರಾಜಕೀಯ ಉದ್ದೇಶದಿಂದ ಯಡಿಯೂರಪ್ಪ ಅವರ ಸರ್ಕಾರ ಇದ್ದ ವೇಳೆ ತನಿಖೆಗೆ ಆದೇಶ ನೀಡಿದ್ದರು.

ನನಗೆ ನ್ಯಾಯಲಯದ ಬಗ್ಗೆ ಗೌರವ, ನಂಬಿಕೆಯಿದೆ. ಅಗತ್ಯ ಸಂದರ್ಭದಲ್ಲಿ ಸೂಕ್ತ ಉತ್ತರ ಕೊಡುತ್ತೇನೆ.

ಏನೇ ಪ್ರೇರಣೆ ಇರಬಹುದು, ಆದರೆ ನಾನು ಕಾನೂನು ಚೌಕಟ್ಟಿನಲ್ಲೇ ಹೋರಾಟ ಮಾಡುತ್ತೇನೆ ಎಂದು ತಿಳಿಸಿದರು.

## ಸಾಕ್ಷಿ ಸುಭಾಷಿತ

ಪುಸ್ತಕಗಳನ್ನು ಓದುವುದರ ಮೂಲಕ ಜಗತ್ತನ್ನು ಅತ್ಯಂತ ಸುಲಭ ವೆಚ್ಚದಲ್ಲಿ ನೋಡಬಹುದು
–ಪುಸ್ತಕ ಪ್ರಿಯ

## ಸಂಪಾದಕೀಯ

### ಪ್ರಧಾನಿ ನರೇಂದ್ರ ಮೋದಿ ಮಾತಾಡಲ್ಲ, ರಾಹುಲ್ ಗಾಂಧಿ ದೂರು ಕೊಡಲ್ಲ

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮತ್ತೊಮ್ಮೆ ಅದಾನಿ ಸಂಸ್ಥೆ ಮೇಲೆ ಆರೋಪ ಮಾಡಿದ್ದಾರೆ. ನರೇಂದ್ರ ಮೋದಿ ಪ್ರಧಾನಿ ಆದಾಗಿನಿಂದ ಕಾಂಗ್ರೆಸ್ ನಾಯಕರು ಆಗಾಗ ಅದಾನಿ ಸಂಸ್ಥೆಯ ಮೇಲೆ ಮುಗಿಬೀಳುತ್ತಲೆ ಇದ್ದಾರೆ. ಕಾಕತಾಳೀಯ ಎಂಬಂತೆ ಹಿಡನ್ ಬರ್ಗ್ ತನಿಖಾ ಸಂಸ್ಥೆಯು ಅದಾನಿ ಸಮೂಹದ ಕುರಿತಾಗಿ ವರದಿ ಪ್ರಕಟಿಸಿ, ಅದಾನಿ ಸಮೂಹದ ಷೇರುಗಳ ಕುಸಿತಕ್ಕೆ ಕಾರಣವಾಗಿತ್ತು.

ಹಿಡನ್ ಬರ್ಗ್ ತನಿಖಾ ಸಂಸ್ಥೆ ಮಾಡಿದ ಆರೋಪದಂತೆ ರಾಹುಲ್ ಗಾಂಧಿ ಮತ್ತೊಂದು ಆರೋಪ ಮಾಡಿದ್ದಾರೆ. ಇಂಡೋನೇಷ್ಯಾದಿಂದ ಆಮದು ಮಾಡಿಕೊಂಡ ಕಲ್ಲಿದ್ದಲಿಗೆ ಹೆಚ್ಚಿನ ದರ ಪಾವತಿಸಿದ್ದು, ಸುಮಾರು 12 ಸಾವಿರ ಕೋಟಿ ರೂ. ಭ್ರಷ್ಟಾಚಾರ ನಡೆಸಿದೆ ಎಂದು ಫೈನಾನ್ಶಿಯಲ್ ಟೈಮ್ಸ್ ವರದಿ ಆಧರಿಸಿ ಆರೋಪ ಮಾಡಿದ್ದಾರೆ. ಈ ವಿಷಯದಲ್ಲಿ ಪ್ರಧಾನಿ ನರೇಂದ್ರ ಮೋದಿ ಮೌನವಾಗಿರುವುದು ಮಾತ್ರವಲ್ಲ, ಅದಾನಿಗೆ ರಕ್ಷಣೆಯನ್ನೂ ನೀಡುತ್ತಿದ್ದಾರೆ ಎಂದು ಆರೋಪಿಸಿದ್ದಾರೆ.

ರಾಹುಲ್ ಗಾಂಧಿ ಆರೋಪದ ಸತ್ಯಾಸತ್ಯತೆ ಕುರಿತು ತತಕ್ಷಣಕ್ಕೆ ವಿಮರ್ಶೆ ಮಾಡಲು ಸಾಧ್ಯವಿಲ್ಲ. ಆದರೆ ಪ್ರಧಾನಿ ನರೇಂದ್ರ ಮೋದಿ ಅವರ ಮೌನದ ಬಗ್ಗೆ ಚರ್ಚೆ ಮಾಡಬೇಕಾಗಿದೆ. ಅದಾನಿ ಸಮೂಹ ಸಂಸ್ಥೆ ದೇಶದ ಅತ್ಯಂತ ಪ್ರತಿಷ್ಠಿತ ಸಂಸ್ಥೆ. ಲಕ್ಷಾಂತರ ಜನರಿಗೆ ಉದ್ಯೋಗ ನೀಡಿದೆ. ದೇಶದ ಆರ್ಥಿಕತೆಯಲ್ಲಿ ಅದಾನಿ ಸಮೂಹ ಸಂಸ್ಥೆಯ ಪಾತ್ರವೂ ಇದೆ. ಆದರೆ ಅದರ ಕುರಿತಾಗಿ ಆರೋಪಗಳ ಬಂದಾಗ ಮೌನವಾಗಿರುವುದು ಸರಿಯಲ್ಲ. ಕನಿಷ್ಠಪಕ್ಷ ರಾಜಕೀಯ ಆರೋಪಗಳಿಗಾದರೂ ಪ್ರತಿಕ್ರಿಯಿಸುವುದು ಅಗತ್ಯವಾಗಿದೆ.

ಖುದ್ದು ಪ್ರಧಾನಿಯೇ ಆ ಬಗ್ಗೆ ಮಾತಾಡಬೇಕು ಅಂತಲ್ಲ. ಆದರೆ ಪ್ರತಿಪಕ್ಷದ ನಾಯಕರೊಬ್ಬರು ಮಾಡಿದ ಆಪಾದನೆಗಳಿಗೆ ಕನಿಷ್ಠ ಪ್ರತಿಕ್ರಿಯೆ ನೀಡುವ ಸೌಜನ್ಯ ವ್ಯಕ್ತಪಡಿಸಬೇಕು.

ಆದರೆ ಅದು ಆಗುತ್ತಿಲ್ಲ. 2014ರಿಂದ ಈವರೆಗೆ ಪ್ರಧಾನಿ ನರೇಂದ್ರ ಮೋದಿ ಅನೇಕ ವಿಷಯಗಳ ಬಗ್ಗೆ ಮಾತಾಡಿದ್ದಾರೆ. ಆದರೆ ರಾಜಕೀಯ ಆರೋಪಕ್ಕೆ ಒಮ್ಮೆಯ ಪ್ರತಿಕ್ರಿಯೆ ಕೊಟ್ಟಿಲ್ಲ. ಇನ್ನು ಮಾಧ್ಯಮ ಗೋಷ್ಠಿ ನಡೆಸುವ ಗೋಜಿಗೂ ಹೋಗಿಲ್ಲ.

ಒಟ್ಟಾರೆ ಪ್ರಧಾನಿ ಮೌನ ಮುರಿಯುವುದಿಲ್ಲ. ರಾಹುಲ್ ಗಾಂಧಿ ಆರೋಪ ಮಾಡುವುದು ನಿಲ್ಲಿಸುವುದಿಲ್ಲ. ಕಾಂಗ್ರೆಸ್ ನಾಯಕರು ಅದಾನಿ ಸಮೂಹದ ಮೇಲೆ ವಾಗ್ದಾಳಿ ನಡೆಸುತ್ತಾರೆ ವಿನಃ, ಅದನ್ನು ಕಾನೂನು ರೀತಿಯಲ್ಲಿ ತನಿಖಾ ಸಂಸ್ಥೆಗಳಿಗೆ ದೂರು ನೀಡಿ ಅವ್ಯವಹಾರ ಬಯಲಿಗೆಳೆಯುವ ಪ್ರಯತ್ನ ಮಾಡುವುದಿಲ್ಲ. ಒಟ್ಟಾರೆ ಅವರು ಮಾತಾಡಲ್ಲ, ಇವರು ದೂರು ಕೊಡಲ್ಲ.

### ಪ್ರಕೃತಿಯ ರಕ್ಷಣೆಗೆ ನಾವು ಮುಂದಾಗದಿದ್ದರೆ ಮನುಕುಲಕ್ಕೆ ಉಳಿಗಾಲವಿಲ್ಲ

# ಇರುವುದೊಂದೇ ಭೂಮಿ!



ನಮಗೆ ಆಶ್ರಯ ನೀಡಿರುವ ತಾಯಿಯನ್ನು, ಎಲ್ಲವನ್ನೂ ಕರುಣಿಸಿ ನಮ್ಮನ್ನು ಪೊರೆಯುತ್ತಿರುವ ಪ್ರಕೃತಿಯನ್ನು, ಇರುವ ಏಕೈಕ ಭೂಮಿಯನ್ನೇ ಬಲಿ ಕೊಡುತ್ತ ನಮ್ಮ ಅಭಿವೃದ್ಧಿಯನ್ನು ಸಾಧಿಸುವತ್ತ ಹೊರಟಿದ್ದೇವೆಂದರೆ, ಅದಕ್ಕಿಂತ ದೊಡ್ಡ ದುರ್ಗತಿಯಿದೆಯಾ?! ಮುಂದುವರೆದ ದೇಶಗಳಲ್ಲಿ ಸ್ವಾಭಾವಿಕ ಮರಗಳನ್ನು ಬೆಳೆಸಲು ವಿಫಲವಾಗಿ, ಕೃತಕ ಮರಗಳನ್ನು ಸ್ಥಾಪಿಸುವಲ್ಲಿಗೆ ಬಂದು ತಲುಪಿದ್ದೇವೆಂದರೆ, ವಿನಾಶದ ದಾರಿಯ ಬಗ್ಗೆ ನಿಚ್ಚಳವಾಗುತ್ತದೆ.

ಇಲ್ಲದ ಕನಸು ಕಾಣುತ್ತ ನಾವಿಂದು ಯಾವ ದಿಸೆಯಲ್ಲಿ ಸಾಗುತ್ತಿದ್ದೇವೆಂಬುದರ ಅಂದಾಜು ನಮಗಿಲ್ಲ. ವಿದ್ಯಾವಂತರೆಂದು ನಮಷ್ಟಕ್ಕೆ ನಾವು ಬೀಗುತ್ತ, ಭೂಮಿತಾಯಿಗೆ ಇನ್ನಿಲ್ಲದ ನೋವು ನೀಡುತ್ತ ನಾವು ಮುಂದುವರೆಯುತ್ತಿರುವ ದಾರಿ ಸರಿಯಾಗಿದೆಯಾ ಎಂದು ಒಮ್ಮೆಯೂ ಯೋಚಿಸಿಲ್ಲ. ನಾವೀಗ ಸಾಗುತ್ತಿರುವ ದಾರಿ ಪ್ರಕೃತಿಯ ವಿನಾಶ, ತನ್ಮೂಲಕ ನಮ್ಮದೇ ಗೋರಿಯನ್ನು ನಾವು ಕಟ್ಟಿಕೊಳ್ಳಹೊರಟಿದ್ದೇವೆಂಬುದಂತೂ ಅಷ್ಟೇ ಸತ್ಯ. ಮಾನವ ತನ್ನ ಅಗತ್ಯತೆಗಳಿಗಾಗಿ ಭೂಮಿಯನ್ನು ಹಾಳುಗೆಡವದೇ ಸನ್ಮಾರ್ಗದಲ್ಲಿ ಸಾಗುತ್ತ, ಪ್ರಕೃತಿಯಲ್ಲೊಬ್ಬರಾಗಿ ಮುಂದಡಿಯಿಟ್ಟರೆ ಭೂಮಿ ನಮಗೆ ಕೇಳಿದ್ದೆಲ್ಲವನ್ನೂ ಕೊಡುತ್ತಿತ್ತು. ಈಗಲೂ ಕೊಟ್ಟಿದೆ. ಮನುಷ್ಯ ಸಂಕುಲದ ದುರಾಸೆಗೆ ಅಳತೆಗೋಲು ಇಲ್ಲದಂತಾಗಿ, ಭೂಮಿ, ಪ್ರಕೃತಿ, ನಮ್ಮ ಸಹಜೀವಿಗಳ ಬಗ್ಗೆ ಯಾವುದೇ ಭಾವನೆಗಳನ್ನಿಟ್ಟುಕೊಳ್ಳದೆ, ಅವೂ ಕೂಡ ಈ ಭೂಮಿಯ ಮೇಲೆ ವಾಸಿಸಲು ನಮ್ಮಷ್ಟೇ ಹಕ್ಕುದಾರರು ಎಂದು ಅರ್ಥೈಸಿಕೊಳ್ಳದೆ ಅಟ್ಟಹಾಸ ಮೆರೆಯುತ್ತಲೇ ಸಾಗುತ್ತಿದ್ದೇವಲ್ಲ, ಮುಂದಿನ ಪರಿಣಾಮವನ್ನು ಈಗಿನ ವಿಜ್ಞಾನ ಲೋಕದ ಯಾವುದೇ ಯಂತ್ರವೂ ಅಳೆಯಲಾರದೇನೋ. ಇಷ್ಟಕ್ಕೂ ನಾವು ಅಭಿವೃದ್ಧಿಯೆಂದುಕೊಳ್ಳುತ್ತಿರುವುದು ನಿಜಕ್ಕೂ ಅಭಿವೃದ್ಧಿಯೇ ಹೌದಾ, ನಮಗೇ ಸ್ಪಷ್ಟತೆಯಿಲ್ಲ. ನಾವಿಂದು ಅಭಿವೃದ್ಧಿಯೆಂದು ಬಾಯ್ಬಡಿದುಕೊಳ್ಳುತ್ತ ಕೈಗೊಳ್ಳುತ್ತಿರುವುದು ನಿಜವಾದ ಅಭಿವೃದ್ಧಿಗೋಸ್ಕರವಾ ಅಥವಾ ನಮ್ಮ ದುರಾಸೆಗಾಗಿಯಾ ಎಂಬುದರ ಅರಿವಿಲ್ಲ.

ಸಹಜವಾಗಿ ತನ್ನಷ್ಟಕ್ಕೆ ತಾನೆಂಬಂತೆ ಬೆಳೆದು ಅದೆಷ್ಟೋ ಜೀವರಾಶಿಗಳಿಗೆ ಆಶ್ರಯವಾಗಿದ್ದ ಕಾಡನ್ನು ಬರಿದು ಮಾಡುತ್ತ, ಅಲ್ಲೆಲ್ಲಾ ನಗರಗಳನ್ನು ವಿಡಾಯಿಸುತ್ತ, ಕಂಡಕಂಡದ್ದನ್ನೆಲ್ಲ 'ನನ್ನದೇ' ಎನ್ನುತ್ತ, ನಮ್ಮ ವಿನಾಶಕ್ಕೆ ನಾವೇ ದಾರಿ ಮಾಡಿಕೊಡುತ್ತಿರುವ ಏಕೈಕ ಜೀವಿ ಮನುಷ್ಯ ಮತ್ತು ಮನುಷ್ಯನೊಬ್ಬನೇ. ಈ ವರ್ತನೆಗೆ ಬೇಸತ್ತ ವಸುಧೆ ಸಾಕಷ್ಟು ಬಾರಿ ಎಚ್ಚರಿಕೆ ನೀಡ್ದಾಳೆ ಕೂಡ.

ಕಾಡಿನಲ್ಲಿ ಒಂದು ಮರ ವಯೋಸಹಜವಾಗಿ ಒಣಗಿ ಸತ್ತಿತೆಂದರೆ ಚಿಂತೆಯಿಲ್ಲ. ಏಕೆಂದರೆ, ಅದರಲ್ಲಿ ಬೆಳೆದ ಹಣ್ಣನ್ನು ತಿಂದ ಇನ್ಯಾವುದೋ ಪ್ರಾಣಿಯೋ, ಪಕ್ಷಿಯೋ ಅದರ ಬೀಜವನ್ನು ಅದೇ ಕಾಡಿನಲ್ಲಿ ಬಿತ್ತಿರುತ್ತದೆ. ಆದರೆ ಮನುಷ್ಯ? ತಾನು ನೆಟ್ಟು ಬೆಳೆಸಿದ್ದಲ್ಲದಿದ್ದರೂ ಇದು ತನ್ನದೇ ಎಂಬ ಭಾವನೆಯಿಂದ ಕಡಿದು ನೆಲಕ್ಕುರುಳಿಸುತ್ತಾನೆ. ನೈಜ ಅಗತ್ಯತೆಗೆ ಕಡಿದದ್ದಾದರೆ, ಒಂದರ ಬದಲು ಇನ್ನೂ ಹತ್ತು ಮರಗಳನ್ನು ಬೆಳೆಸಲು ಮುಂದಾಗಬೇಕಿತ್ತು. ಆದರೆ, ಉದ್ದೇಶ ಅದಲ್ಲವಲ್ಲ?!

ಗಮನಿಸಿನೋಡಿ, ಇಂದು ನಮ್ಮ ಅಭಿವೃದ್ಧಿ ಮಂತ್ರದಿಂದ ಅದೆಷ್ಟೋ ನದಿಗಳ ನೀರು ಕುಡಿಯಲು ಯೋಗ್ಯವಾಗಿಲ್ಲ. ಕಾರಣ ನಾವೇ ಅಲ್ಲದೆ ಮತ್ತಿನ್ಯಾರು? ಸಹಜವಾಗಿದ್ದ ನದೀಪಾತ್ರದಲ್ಲಿ ಅಸಹಜವಾಗಿ ಮೂಗು ತೂರಿಸಿ ಮರಳು ತೆಗೆದು ಮಹಲು ಕಟ್ಟಿದೆವು. ಅದನ್ನೇ ಅಭಿವೃದ್ಧಿಯೆಂದು ನಂಬಿದೆವು, ನಂಬಿಸಿದೆವು. ಇದ್ದೆಲ್ಲಾ ತ್ಯಾಜ್ಯವನ್ನು ಮೊಗೆಮೊಗೆದು ಅದೇ ನದಿಗೆ ಚೆಲ್ಲಿದೆವು. ಮತ್ತೆ ನೀರು ಕೆಟ್ಟಿದೆ ಎಂದು ಬೊಬ್ಬೆಯನ್ನೂ ಹಾಕಿದೆವು. ನೀರು ಅದರಷ್ಟಕ್ಕೆ ಕೆಟ್ಟಿದ್ದಲ್ಲ, ನಾವೇ ಕೆಡಿಸಿದೆವು ಎಂದು ಪ್ರಾಮಾಣಿಕವಾಗಿ ಒಪ್ಪಿಕೊಳ್ಳುವ ಒಬ್ಬರನ್ನಾದರೂ ಹುಡುಕಿ ತೋರಿಸಿ ನೋಡೋಣ! ಉದಾಹರಣೆ ಬೇಕಾ? ಸಾಮಾನ್ಯ 1–2 ಸಾವಿರ ಜನಸಂಖ್ಯೆಯಿರುವ ಅದೆಷ್ಟೋ ಹಳ್ಳಿಗಳಲ್ಲಿ 'ಶುದ್ಧ ಕುಡಿಯುವ ನೀರಿನ ಘಟಕ'ಗಳು ಸ್ಥಾಪನೆಯಾಗಿವೆ. ಇದರ ಅಗತ್ಯವಿತ್ತಾ ಅಥವಾ ಗುಂಡಿ ತೋಡುವ ಕೆಲಸಕ್ಕೆ ಕೈಹಾಕುವ ಮುನ್ನ ಎಚ್ಚರಿಕೆಯ ಅಗತ್ಯವಿತ್ತಾ?

ಮತ್ತೆ, ಈ ಪ್ಲಾಸ್ಟಿಕ್ ಎಂಬ ವಿಷದ ಮುಂದೆ ಬೇರೆ ಕಾರ್ಕೋಟಕದ ಅಗತ್ಯವೇ ಇಲ್ಲವೆನುಸತ್ತದೆ. ನಾಡು ಬಿಡಿ, ನಮ್ಮದೇ ವಿಕೃತ ಮೋಜು–ಮಸ್ತಿಯ ಉದ್ದೇಶದಿಂದ ಹಳ್ಳಿ–ಹಳ್ಳಿಗಳಲ್ಲಿ, ಅವುಗಳಂಚಿನ ಕಾಡುಗಳಲ್ಲಿ, ಮಳೆಗಾಲದಲ್ಲಿ ತುಂಬಿ ಹರಿಯುವ ಗಟಾರಗಳ ಮೂಲಕ ಅದೆಷ್ಟೋ ಟನ್ ಪ್ಲಾಸ್ಟಿಕ್ ತ್ಯಾಜ್ಯಗಳು ತೊರೆ, ನದಿ, ಸಮುದ್ರ ಸೇರಿ ಹಾವಳಿಯೆಬ್ಬಿಸುತ್ತಿವೆ. ನೂರಾರು ವರ್ಷಕ್ಕೂ ಕರಗದ ಈ ಪ್ಲಾಸ್ಟಿಕ್ ಮಾಲಿನ್ಯ ನಮ್ಮದೇ ಕೊಡುಗೆಯಲ್ಲದೆ ಮತ್ತಿನ್ನೇನು? ಸಣ್ಣ ಸಣ್ಣ ಹಳ್ಳಿಗಳ ಗೂಡಂಗಡಿಗಳಲ್ಲೂ ಪ್ಲಾಸ್ಟಿಕ್ ಕ್ಯಾರಿಬ್ಯಾಗ್ ಎತ್ತಿತ್ತಿ ಕೊಡುತ್ತಾರೆ. ನಿಯಂತ್ರಿಸಬೇಕೆಂದು ಬೊಬ್ಬಿರಿಯುವ ಸರ್ಕಾರದ ಕೂಗಿನ ಹಿಂದೆಯೂ ದುರಾಸೆಯಿಲ್ಲವಾ? ಅಲ್ಲಲ್ಲಿ ಅಂಗಡಿಗಳ ಮೇಲೆ ದಾಳಿ ಮಾಡಿ ಪ್ಲಾಸ್ಟಿಕ್ ವಶಪಡಿಸಿಕೊಂಡೆವು ಎನ್ನುವವರು, ಅವುಗಳ ಉತ್ಪಾದನಾ ಘಟಕಗಳನ್ನೇ ಬಂದ್ ಮಾಡಿಸುವ ಅಧಿಕಾರವನ್ನೂ ಹೊಂದಿವೆಯಲ್ಲ? ಈ ಬಗ್ಗೆ ಎಲ್ಲರೂ ವಿಚಾರ ಮಾಡಲೇಬೇಕಿದೆ.

– ಅಲೆಮಾರಿ.

## ಅ. 26ರಂದು ಐಐಎಂ ಬೆಂಗಳೂರು ಸುವರ್ಣ ಮಹೋತ್ಸವಕ್ಕೆ ರಾಷ್ಟ್ರಪತಿ ಮುರ್ಮು ಚಾಲನೆ

■ವಿಜಯಸಾಕ್ಷಿ ಸುದ್ದಿ, ಬೆಂಗಳೂರು

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಐಐಎಂ ಬೆಂಗಳೂರು ಸುವರ್ಣ ಮಹೋತ್ಸವ ಪ್ರತಿಷ್ಠಾನ ಸಪ್ತಾಹವನ್ನು ಅಕ್ಟೋಬರ್ 26 ರಂದು ಉದ್ಘಾಟಿಸಲಿದ್ದಾರೆ ಎಂದು ಉನ್ನತ ಶಿಕ್ಷಣ ಸಂಸ್ಥೆ ಗುರುವಾರ ತಿಳಿಸಿದೆ.

ಸುವರ್ಣ ಮಹೋತ್ಸವದ ಅಂಗವಾಗಿ ಐಐಎಂ ಬೆಂಗಳೂರು ಸರಣಿ ಕಾರ್ಯಕ್ರಮಗಳನ್ನು ಆಯೋಜಿಸುತ್ತಿದೆ. ಮೊದಲ ದಿನ(ಅಕ್ಟೋಬರ್ 26) ಐಐಎಂಬಿ ಆಡಿಟೋರಿಯಂನಲ್ಲಿ ಸಂಜೆ 4 ರಿಂದ ಸಂಜೆ 5 ಗಂಟೆಯವರೆಗೆ ನ ಡೆ ಂ ು ು ಲಿ ರ ು ವ ಸ ಮಾ ರ ಂ ಭ ದ ಲ್ಲಿ ರಾಷ್ಟ್ರಪತಿ ಮುರ್ಮು ಅವರು ಕಾರ್ಯಕ್ರಮ ಉದ್ಘಾಟಿಸಿ ಭಾಷಣ ಮಾಡಲಿದ್ದಾರೆ. ನಂತರ ಐಐಎಂಬಿ ಕ್ಯಾಂಪಸ್‌ನಲ್ಲಿ ಪುಸ್ತಕ ಬಿಡುಗಡೆ ಹಾಗೂ ಚಲನಚಿತ್ರ ಪ್ರದರ್ಶನ ನಡೆಯಲಿದೆ. ರಾಜ್ಯಪಾಲ ತಾವರ್ ಚಂದ್ ಗೆಹ್ಲೋಟ್ ಅವರು ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿ ಸಭೆಯನ್ನು ಉದ್ದೇಶಿಸಿ ಮಾತನಾಡಲಿದ್ದಾರೆ.



ಐಐಎಂ ಬೆಂಗಳೂರು ಆಡಳಿತ ಮಂಡಳಿಯ ಅಧ್ಯಕ್ಷರಾದ ಡಾ. ದೇವಿ ಪ್ರಸಾದ್ ಶೆಟ್ಟಿ ಮತ್ತು ಐಐಎಂ ಬೆಂಗಳೂರು ನಿರ್ದೇಶಕ ಪ್ರೊ ರಿಷಿಕೇಶ ಟಿ ಕೃಷ್ಣನ್ ಅವರು ಕಾರ್ಯಕ್ರಮದಲ್ಲಿ ಉಪಸ್ಥಿತರಿರಲಿದ್ದಾರೆ.

### 2023-24ನೇ ಸಾಲಿನ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಜಿಲ್ಲಾ ಮಟ್ಟದ ಕ್ರೀಡಾಕೂಟ

## ಗ್ರಾಮೀಣ ವಿದ್ಯಾರ್ಥಿಗಳು ರಾಷ್ಟ್ರಮಟ್ಟದಲ್ಲಿ ಸಾಧನೆ ಮಾಡಲಿ



■ವಿಜಯಸಾಕ್ಷಿ ಸುದ್ದಿ, ಗದಗ

ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಕ್ರೀಡೆ ಸಹಕಾರಿಯಾಗಲಿದೆ. ಗ್ರಾಮೀಣ ವಿದ್ಯಾರ್ಥಿಗಳಿಗೆ ಕ್ರೀಡೆಯಲ್ಲಿ ಭಾಗವಹಿಸಲು ಪ್ರೋತ್ಸಾಹ, ತರಬೇತಿ ನೀಡುವ ಮೂಲಕ ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಸಾಧನೆ ಮಾಡುವಂತಾಗಬೇಕು ಎಂದು ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ರವಿ ಗುಂಜೀಕರ ಹೇಳಿದರು.

ಬುಧವಾರ ನಗರದ ಕೆ.ಎಚ್ ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಗದಗ ಶಾಲಾ ಶಿಕ್ಷಣ ಇಲಾಖೆ, ಗದಗ ವತಿಯಿಂದ ಆಯೋಜಿಸಿದ್ದ 2023–24ನೇ ಸಾಲಿನ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ ಕ್ರೀಡಾ ಜ್ಯೋತಿ ಸ್ವೀಕರಿಸಿ ಮಾತನಾಡಿದರು.

ಗದಗ ಡಯಟ್ ಪ್ರಾಚಾರ್ಯ ಜಿ.ಎಲ್ ಬಾರಾಟಕ್ಕೆ ಕ್ರೀಡಾ ಕೂಟದ ಧ್ವಜಾರೋಹಣ ನೆರವೇರಿಸಿ ಮಾತನಾಡಿ, ನಿರ್ಣಾಯಕರ ನಿರ್ಣಯಕ್ಕೆ ಬದ್ಧರಾಗಿ, ಸಾಧನೆ ಮಾಡಿ ತಮ್ಮ ಜೀವನವನ್ನು ರೂಪಿಸಿಕೊಳ್ಳಲು ಕರೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎಂ.ಎ ರಡ್ಡೇರ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಶರೀರ ಸಂಪತ್ತು ಇದ್ದಾಗ ಮಾತ್ರ ಏನನ್ನಾದರೂ ಸಾಧಿಸಲು ಸಾಧ್ಯ. ಮಕ್ಕಳು ಕ್ರೀಡೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿ ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಜಯಶಾಲಿಯಾಗಬೇಕು ಎಂದರು.

ಮುಖ್ಯ ಅತಿಥಿಗಳಾಗಿ ಗದಗ ಶಹರ ಕ್ಷೇತ್ರ ಶಿಕ್ಷಾಧಿಕಾರಿ ಆರ್. ಎಸ್ ಬುರಡಿ, ವ್ಹಿ.ಎಂ ಹಿರೇಮಠ, ವಸಂತ ಕಲಕಂಬಿ, ಕೆ.ಬಿ ಕೊಣ್ಣೂರ, ಬಿ.ಎಫ್ ಪೂಜಾರ, ಜಿಲ್ಲಾ ದೈಹಿಕ ಶಿಕ್ಷಣ ಅಧೀಕ್ಷಕ ಎಂ.ಎಂ ಹವಳದ, ಗದಗ ಶಹರ ದೈಹಿಕ ಶಿಕ್ಷಣ ಅಧೀಕ್ಷಕ ಜಿ.ಎಂ ಜಗದೀಶ, ಗ್ರಾಮೀಣ ದೈಹಿಕ ಶಿಕ್ಷಣ ಅಧೀಕ್ಷಕ ಟಿ.ಎಸ್ ಪವಾರ, ಬಸವಣ್ಣೆಪ್ಪ, ಎಂ.ಎಚ್ ಕುಚಬಾಳ, ಎಸ್.ಬಿ ಮುಳಗುಂದ, ಹವಾಲ್ದಾರ್, ಜಿ.ಡಿ ದಾಸರ, ಎಮ್.ಕೆ ಲಮಾಣಿ, ಬಿ.ಕೆ ನಿಂಬನಗೌಡ್ರ, ಶಿವಾನಂದ ಗಿಡ್ನಂದಿ ಮುಂತಾದವರು ಉಪಸ್ಥಿತರಿದ್ದರು.

ಎಸ್.ಬಿ ಮುಳಗುಂದ ಪ್ರತಿಜ್ಞೆ ಬೋಧಿಸಿದರು. ಎಂ.ಎಚ್ ಕುಚಬಾಳ ಸ್ವಾಗತಿಸಿ ಪ್ರಾಸ್ತಾವಿಕ ಮಾತನಾಡಿದರು. ಪಿ.ಕೆ ಅವರಡ್ಡಿ ನಿರೂಪಿಸಿದರು. ಎಂ.ವ್ಹಿ ಪಾಟೀಲ ವಂದಿಸಿದರು.

### ಅಡವೀಂದ್ರ ಮಠದಲ್ಲಿ 'ಆಧುನಿಕ ದಿನಗಳಲ್ಲಿ ಕೃಷಿ ಪದ್ಧತಿ' ಉಪನ್ಯಾಸ ನೀಡಿದ ಡಾ.ರಫಿ

# ನಂಬಿದವರನ್ನು ಭೂಮಿತಾಯಿ ಕೈಬಿಡಳು

■ವಿಜಯಸಾಕ್ಷಿ ಸುದ್ದಿ, ಗದಗ

ವಿಜ್ಞಾನ ಮತ್ತು ತಂತ್ರಜ್ಞಾನದಿಂದ ನಾವು ಎಷ್ಟೇ ಪ್ರಗತಿ ಸಾಧಿಸಿದ್ದರೂ ಅನ್ನವನ್ನು ಭೂಮಿ ತಾಯಿಯಿಂದಲೇ ಪಡೆಯಬೇಕು. ಹೆತ್ತ ತಾಯಿ, ಹೊತ್ತ ಭೂದೇವಿಯ ಮುಂದೆ ಯಾರೂ ದೊಡ್ಡವರಲ್ಲ. ಈ ಭೂದೇವಿಯನ್ನು ನಂಬಿ ಕೃಷಿಗೈದವರನ್ನು ಎಂದೂ ಕೈಬಿಡದೆ ಫಲ ಕೊಡಬಲ್ಲಳು ಎಂದು ಗದುಗಿನ ಕೃಷಿ ಸಂಶೋಧನಾ ಕೇಂದ್ರ ಮುಖ್ಯಸ್ಥ, ಪ್ರಾಧ್ಯಾಪಕ, ವಿಜ್ಞಾನಿ ಡಾ. ಸಿ.ಎಂ ರಫಿ ಹೇಳಿದರು.

ಅವರು ಇತ್ತೀಚೆಗೆ ಗದುಗಿನ ಅಡವೀಂದ್ರ ಸ್ವಾಮಿ ಮಠದಲ್ಲಿ ದಸರಾ–ಜಾತ್ರಾ ಮಹೋತ್ಸವದಲ್ಲಿ 'ಇಂದಿನ ಆಧುನಿಕ ದಿನಗಳಲ್ಲಿ ಕೃಷಿ ಪದ್ಧತಿ' ವಿಷಯವಾಗಿ ಮಾತನಾಡಿದರು.



ಸಮಾರಂಭದ ಸಮ್ಮುಖ ವಹಿಸಿದ್ದ ಶ್ರೀಮಠದ ಧರ್ಮದರ್ಶಿ ವೇ.ಮೂ ಮಹೇಶ್ವರ ಸ್ವಾಮೀಜಿ ಹೊಸಳ್ಳಿಮಠ ಮಾತನಾಡಿ, ಡಾ.ರಾಜಗುರು ಗುರುಸ್ವಾಮಿ ಕಲಕೇರಿ ಗವಾಯಿಗಳು ಸಂಗೀತ, ಸಾಹಿತ್ಯದ ಮೂಲಕ ಪ್ರಸ್ತುತಪಡಿಸುತ್ತಿರುವ ದೇವಿ ಪುರಾಣ ಪ್ರವಚನ ಭಕ್ತರಲ್ಲಿ ಶ್ರದ್ಧಾಭಕ್ತಿಯನ್ನು ಸ್ಫುರಿಸಿದೆ ಹಾಗೆಯೇ ಕೃಷಿಯಲ್ಲಿ ಖುಷಿ ಕಂಡ ಹಿರಿಯ ವಿಜ್ಞಾನಿ ಅಪಾರ ಜ್ಞಾನವನ್ನು ಹೊಂದಿರುವ ಡಾ.ಸಿ.ಎಂ.ರಫಿ ಅವರು ಗದಗ ಜಿಲ್ಲೆಯ ಎಲ್ಲ ರೈತ ಬಾಂಧವರಿಗೆ ಅಚ್ಚುಮೆಚ್ಚಿನ ಮಾರ್ಗದರ್ಶಕರಾಗಿದ್ದಾರೆ ಎಂದರು.

ಡಾ.ರಾಜಗುರು ಗುರುಸ್ವಾಮಿ ಕಲಕೇರಿ ಗವಾಯಿಗಳಿಂದ ಪುರಾಣ–ಪ್ರವಚನ ಜರುಗಿತು. ಚನ್ನಬಸಯ್ಯ ಶಾಸ್ತ್ರೀ ಹೇಮಗಿರಿಮಠ ಪುರಾಣ ಪಠಿಸಿದರು. ಸುಕ್ರುಸಾಬ ಮುಲ್ಲಾ, ಜಗನ್ನಾಥ ಕಲಬುರ್ಗಿ, ಗುರುನಾಥ ಸುತಾರ, ಎಸ್.ಬಿ ಭಜಂತ್ರಿ ಸಂಗೀತ ಸಾಥ್ ನೀಡಿದರು. ಸಮಾರಂಭದಲ್ಲಿ ಕೃಷಿ ವಿಜ್ಞಾನಿ ಡಾ. ಸಿ.ಎಂ ರಫಿ ಹಾಗೂ ಶ್ರೀಮತಿ ನಾಜ್ಮೀನಬಾನು ರಫಿ ಅವರನ್ನು ಸನ್ಮಾನಿಸಲಾಯಿತು.

ವೇದಿಕೆಯ ಮೇಲೆ ಮುಖ್ಯ ಅತಿಥಿ ನಾಜ್ಮೀನಬಾನು ರಫಿ, ಜಾತ್ರಾ ಮಹೋತ್ಸವದ ಮಹಿಳಾ ಸಮಿತಿಯ ಅಧ್ಯಕ್ಷೆ ಪ್ರಮೀಳಾದೇವಿ ಬಳಿಗಾರ, ಕಾರ್ಯಾಧ್ಯಕ್ಷ ಬಸವರಾಜ ಪಲ್ಲೇದ ಉಪಸ್ಥಿತರಿದ್ದರು.

ಪ್ರಸಾದ ಭಕ್ತಿ ಸೇವೆಯನ್ನು ಎಸ್.ಎಸ್ ಪಾಟೀಲ, ವ್ಹಿ.ಎ ಪಟ್ಟಣಶೆಟ್ಟಿ, ಎಸ್.ಡಿ ಗೌಡಪ್ಪಗೌಡ್ರ, ಶಶಾಂಕ ಮಾಲಿಗೌಡ್ರ, ಮಂಜುಳಾ ಹುಬಳಿಮಠ, ಗುರುನಾಥ ಹೊಸಮನಿ, ಮೋಹನ ಗ್ವಾರಿ, ದತ್ತು ಬಾಕಳೆ, ಬಿ.ವ್ಹಿ ಸಂಕನೂರ, ಸಿದ್ಧಲಿಂಗಪ್ಪ ಯಳವತ್ತಿ, ಶಂಕ್ರಯ್ಯ ಅಬ್ಬಿಗೇರಿಮಠ, ಸಿದ್ಧಲಿಂಗೇಶ ಅಂಗಡಿ ವಹಿಸಿದ್ದರು.

ಸುರೇಖಾ ಪಿಳ್ಳಿ ಸ್ವಾಗತಿಸಿದರು, ವ್ಹಿ.ಎಂ ಕುಂದ್ರಾಳಹಿರೇಮಠ ನಿರೂಪಿಸಿದರು. ಜಿ.ಎಲ್ ಹೊಸಳ್ಳಿಹಿರೇಮಠ ವಂದಿಸಿದರು.

### ಲೋಕ ಕಲ್ಯಾಣಕ್ಕಾಗಿ ಸೂಡಿಯಲ್ಲಿ ನ.28ರಿಂದ ಅತಿರುದ್ರ ಮಹಾಯಾಗ

# ಮಂತ್ರ ಪಠಣದಿಂದ ಧನಾತ್ಮಕ ಶಕ್ತಿ ಪ್ರಾಪ್ತಿ



■ವಿಜಯಸಾಕ್ಷಿ ಸುದ್ದಿ, ನರೇಗಲ್ಲ

ಲೋಕ ಕಲ್ಯಾಣಕ್ಕಾಗಿ ಸೂಡಿಯ ಶ್ರೀ ಚಿದಂಬರೇಶ್ವರ ದೇವಸ್ಥಾನದಲ್ಲಿ ಬರುವ ನವಂಬರ್ 28ರಿಂದ ಡಿಸೆಂಬರ್ 2ರವರೆಗೆ ಅತಿರುದ್ರ ಮಹಾಯಾಗವನ್ನು ನೆರವೇರಿಸಲಾಗುತ್ತಿದೆ. ಅದಕ್ಕೆ ತಾವೆಲ್ಲರೂ ಆಗಮಿಸಿ, ಸ್ವಾಮಿಯ ಸೇವೆಯಲ್ಲಿ ಪಾಲ್ಗೊಳ್ಳಬೇಕೆಂದು ಸೂಡಿ ಶ್ರೀ ಚಿದಂಬರೇಶ್ವರ ದೇವಸ್ಥಾನದ ವೇ.ಬ್ರ.ಶ್ರೀ ಭುಜಂಗ ಶರ್ಮಾ ಜೋಷಿ ನರೇಗಲ್ಲ ಬ್ರಹ್ಮ ಸಮಾಜದ ಭಕ್ತರನ್ನು ವಿನಂತಿಸಿದರು.

ಪಟ್ಟಣದ ಶ್ರೀ ದತ್ತಾತ್ರೇಯ ದೇವಸ್ಥಾನದಲ್ಲಿ ಶ್ರೀ ಚಿದಂಬರ ಜಯಂತಿ ಉತ್ಸವ ಕುರಿತು ನಡೆದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.

150 ಜನ ಋತ್ವಿಜರು ಐದು ದಿನಗಳ ಕಾಲ ರುದ್ರ ಪಠಣ ಮಾಡಿದರೆ ಈ ಅತಿರುದ್ರ ಮಹಾಯಾಗ ಸಂಪನ್ನವಾಗಲು ಸಾಧ್ಯವಾಗುತ್ತದೆ. ಅದಕ್ಕೆ ಈಗಾಗಲೇ ಎಲ್ಲ ವ್ಯವಸ್ಥೆಯೂ ಆಗಿದ್ದು, ಹುಬ್ಬಳ್ಳಿ, ಧಾರವಾಡ, ಹಾವೇರಿ, ಶ್ರೀಕ್ಷೇತ್ರ ಅಗಡಿ ಆನಂದವನ, ಉಡುಪಿ ಮತ್ತು ಬೆಂಗಳೂರಿನಿಂದ ಋತ್ವಿಜರು ಆಗಮಿಸುತ್ತಿದ್ದಾರೆ ಎಂದು ಭುಜಂಗಶರ್ಮಾ ಜೋಷಿ ಹೇಳಿದರು. ಅಧ್ಯಕ್ಷತೆ ವಹಿಸಿದ್ದ ವೇ.ಬ್ರ ಶ್ರೀ ಗಣಪತಿಭಟ್ಟ ಜೋಷಿ ಮಾತನಾಡಿ, ಸೂಡಿಯ ಶ್ರೀ ಚಿದಂಬರೇಶ್ವರ ಕ್ಷೇತ್ರದಲ್ಲಿ ದಿಗಂಬರ ಮತ್ತು ಚಿದಂಬರರ ಸೇವೆ ನಡೆಯುತ್ತದೆ. ಏಕೆಂದರೆ ಅವರಿಬ್ಬರೂ ಒಂದೇ ನಾಣ್ಯದ ಎರಡು ಮುಖಗಳು. ಭಕ್ತಿ, ಯುಕ್ತಿ, ಮುಕ್ತಿ ಸಹಿತ ಭಗವಂತನ ಸೇವೆ ಮಾಡಿದರೆ ಖಂಡಿತ ಭಗವಂತನ ಒಲುಮೆ ಪ್ರಾಪ್ತವಾಗುತ್ತದೆ. ಡಿಸೆಂಬರ್ 3ರಂದು ಶ್ರೀ ಚಿದಂಬರೇಶ್ವರ ಮಹಾಸ್ವಾಮಿಯ ಜಯಂತ್ಯುತ್ಸವ ಇದ್ದು, ಅದರಲ್ಲಿಯೂ ತಾವುಗಳು ಪಾಲ್ಗೊಳ್ಳಬೇಕೆಂದು ಹೇಳಿದರು.

ಮಂತ್ರಗಳಲ್ಲಿ ದಿವ್ಯ ಶಕ್ತಿ ಇದೆ. ಇದು ವೈಜ್ಞಾನಿಕವಾಗಿಯೂ ಸಿದ್ಧಗೊಂಡಿದೆ. ಮಂತ್ರಗಳನ್ನು ಪಠಿಸುವದರಿಂದ, ಕೇಳುವದರಿಂದ ದೇಹದಲ್ಲಿ ಧನಾತ್ಮಕ ಶಕ್ತಿಯ ಸಂಚಯವಾಗುತ್ತದೆ. ಭಗವಂತನ ಕೃಪೆ, ಭಕ್ತರ ಸಹಕಾರದಿಂದ ಇಂತಹ ಮಹತ್ತರ ಕಾರ್ಯಗಳು ನೆರವೇರಲು ಸಾಧ್ಯವಿದೆ. ಆದ್ದರಿಂದ ತಾವೆಲ್ಲರೂ ಸಕಲ ರೀತಿಯಿಂದಲೂ ಸಹಕಾರ ನೀಡಿ ಈ ಮಹಾಯಾಗ ಸಂಪನ್ನವಾಗಲು ಸಹಕರಿಸಬೇಕೆಂದು ಭುಜಂಗಶರ್ಮಾ ಜೋಷಿ ವಿನಂತಿಸಿದರು.

ಸಭೆಯನ್ನುದ್ದೇಶಿಸಿ ರಘುನಾಥ ಕೊಂಡಿ, ರಾಜಶ್ರೀ ಕುಲಕರ್ಣಿ ಮುಂತಾದವರು ಮಾತನಾಡಿದರು. ವೇದಿಕೆಯ ಮೇಲೆ ವೇ.ಮೂ ವಿಶ್ವನಾಥಭಟ್ಟ ವೈದ್ಯ, ವಸಂತ ರಾಜಪುರೋಹಿತ, ಶ್ರೀವಲ್ಲಭಭಟ್ಟ ಸದರಜೋಷಿ ಉಪಸ್ಥಿತರಿದ್ದರು.

ಸಭೆಯಲ್ಲಿ ಎಸ್.ಎಚ್ ಜೋಷಿ, ಬಿ.ಎಲ್ ಕುಲಕರ್ಣಿ, ಆನಂದ ಕಾಳೆ, ಗೋಪಾಲಭಟ್ಟ ಹಂದಿಗೋಳ, ವಿಶ್ವನಾಥಭಟ್ಟ ಗ್ರಾಮಪುರೋಹಿತ, ವೆಂಕಟೇಶ ಕುಲಕರ್ಣಿ, ಪ್ರಶಾಂತ ಗ್ರಾಮಪುರೋಹಿತ, ಆರ್.ಡಿ ಕುಲಕರ್ಣಿ, ಮುಕುಂದಭಟ್ಟ ಸೂರ್ಯಭಟ್ಟನವರ, ಅರುಣ ಗ್ರಾಮಪುರೋಹಿತ, ಅಜಿತ ಕುಲಕರ್ಣಿ, ನಟರಾಜ ಜೋಷಿ, ಶಂಕ್ರಪ್ಪ ಕುಲಕರ್ಣಿ, ರಂಗನಾಥ ಕುಲಕರ್ಣಿ ಮುಂತಾದವರಿದ್ದರು. ಅರುಣ ಬಿ.ಕುಲಕರ್ಣಿ ನಿರೂಪಿಸಿ, ವಂದಿಸಿದರು.

## ಶ್ರೀ ಪ್ರಭುರಾಜೇಂದ್ರ ಶಾರೀರಿಕ ಶಿಕ್ಷಣ ಮಹಾವಿದ್ಯಾಲಯದಲ್ಲಿ ಬೀಳ್ಕೊಡುಗೆ ಸಮಾರಂಭ

■ವಿಜಯಸಾಕ್ಷಿ ಸುದ್ದಿ, ಗದಗ

ಶ್ರೀ ಪ್ರಭುರಾಜೇಂದ್ರ ಶಾರೀರಿಕ ಶಿಕ್ಷಣ ಮಹಾವಿದ್ಯಾಲಯದ ಬಿಪಿಎಡ್ ದ್ವಿತೀಯ ವರ್ಷದ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭವು ಇತ್ತೀಚೆಗೆ ಜರುಗಿತು.

ಅಧ್ಯಕ್ಷತೆಯನ್ನು ಪ್ರಾಚಾರ್ಯ ಬಸವರಾಜ ವಸ್ತ್ರದ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ನಿವೃತ್ತ ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ಅಶೋಕ ಎಂ ಕುಂಟೋಜಿ, ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ವೇದಿಕೆಯ ನಿವೃತ್ತ ಅಧ್ಯಕ್ಷ ವಿ.ಎ ಪಾಟೀಲ, ಶಿವರಾಜ ಪಾಟೀಲ ಸೇರಿದಂತೆ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯರು ಆಗಮಿಸಿದ್ದರು.

ಮಹಾವಿದ್ಯಾಲಯದ ಉಪನ್ಯಾಸಕ ಅಯ್ಯನಗೌಡ ಹಿರೇಗೌಡ್ರ ವಿದ್ಯಾರ್ಥಿಗಳ ಮುಂದಿನ ಜೀವನದ ಕುರಿತು ಪ್ರಾಸ್ತಾವಿಕ ಮಾತನಾಡಿದರು. ಈ ಸಂದರ್ಭದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ವಿವಿಧ ಕ್ರೀಡೆಗಳಲ್ಲಿ ಸಾಧನೆ ಮಾಡಿ ಅಂತರ್ ವಿಶ್ವವಿದ್ಯಾಲಯದ ಕ್ರೀಡಾಕೂಟಕ್ಕೆ ಆಯ್ಕೆಯಾದ ಹೇಮಾ ಜಾಧವ (ಕಬಡ್ಡಿ), ಶಾಹೀದಾಬೇಗಂ ನದಾಫ (ಕುಸ್ತಿ), ಅಕ್ಷಯ ಚವ್ಹಾಣ (ಅಥ್ಲೇಟಿಕ್ಸ್) ಹಾಗೂ ಉತ್ತಮ ವಿದ್ಯಾರ್ಥಿಯಾಗಿ ಆಯ್ಕೆಯಾದ ಪ್ರಶಿಕ್ಷಣಾರ್ಥಿ ಬಾಬು ಚಲವಾದಿಯವರನ್ನು ಸನ್ಮಾನಿಸಲಾಯಿತು.



ಬಸಯ್ಯ ಬಣ್ಣದನೂಲಮಠ, ಕಾಲೇಜಿನ ಎಲ್ಲಾ ಸಿಬ್ಬಂದಿ ವರ್ಗದವರು ಹಾಗೂ ಬಿಪಿಎಡ್ ವಿದ್ಯಾರ್ಥಿಗಳು ಸಮಾರಂಭದಲ್ಲಿ ಉಪಸ್ಥಿತರಿದ್ದರು. ದಾವಲಬಿ ದೊಡ್ಡಮನಿ ನಿರೂಪಿಸಿದರು. ಮಂಜುನಾಥ ಮಾದರ ವಂದಿಸಿದರು.

## ನೀವೂ ನಮ್ಮ ಜೊತೆ ಕೈಜೋಡಿಸಿ

'ವಿಜಯಸಾಕ್ಷಿ'

ನಿಮ್ಮ ಮನೆಯ, ಮನದ ಪತ್ರಿಕೆ ಆಗಲೆಂದು ನಾವು ಬಯಸುತ್ತೇವೆ. ಇಲ್ಲಿ ನಿಮ್ಮ ಅಭಿಪ್ರಾಯ ಹಂಚಿಕೊಳ್ಳಲು ಮುಕ್ತ ಸ್ವಾಗತವಿದೆ.

ನೀವು ಪತ್ರಿಕೆಯ ಕುರಿತು ತಮ್ಮ ಸಲಹೆ, ಮೆಚ್ಚುಗೆ ನಮಗೆ ಬರೆದು ಕಳಿಸಿ..

ಲೇಖನ, ಸಣ್ಣ ಕತೆ, ಕವನ, ಪ್ರಬಂಧ, ಪ್ರವಾಸ ಅನುಭವ ಈ ಕುರಿತು ನೀವೂ ಬರೆಯಬಹುದು.

E-mail: vijayasakshidaily@gmail.com
ಮೊ : 9019256545

## ನವರಾತ್ರಿ ನಿಮಿತ್ತ ಅನ್ನ ಸಂತರ್ಪಣೆ ಇಂದು




■ವಿಜಯಸಾಕ್ಷಿ ಸುದ್ದಿ, ಗದಗ

ಸ್ಥಳೀಯ ಒಕ್ಕಲಗೇರಿ ಓಣಿಯ ಶ್ರೀ ದುರ್ಗಾ ದೇವಿ ದೇವಸ್ಥಾನಲ್ಲಿ ನವರಾತ್ರಿ ಉತ್ಸವದ ಅಂಗವಾಗಿ ಇದೇ ದಿನಾಂಕ.20.10.2023ರಂದು ಮಧ್ಯಾಹ್ನ 1 ಗಂಟೆಗೆ ಮಹಾ ಅನ್ನಸಂತರ್ಪಣೆ ಕಾರ್ಯಕ್ರಮ ಜರುಗಲಿದೆ. ಕಾರಣ ಸಮಸ್ತ ಭಕ್ತರು ಆಗಮಿಸಿ ಪ್ರಸಾದ ಸ್ವೀಕರಿಸಲು ಶ್ರೀ ದುರ್ಗಾ ದೇವಿ ಯುವಕ ಸಂಘದ ಪದಾಧಿಕಾರಿಗಳು ವಿನಂತಿಸಿದ್ದಾರೆ.

## ನಾಳೆ ಪೊಲೀಸ್ ಹುತಾತ್ಮರ ದಿನಾಚರಣೆ

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾ ಪೊಲೀಸ್ ಇಲಾಖೆಯಿಂದ ಕರ್ತವ್ಯ ಪಾಲನೆಯಲ್ಲಿ ಪ್ರಾಣಾರ್ಪಣೆ ಮಾಡಿದ ಪೊಲೀಸರ ನೆನಪಿಗಾಗಿ ಅಕ್ಟೋಬರ್ 21 ರಂದು ಬೆ 8 ಗಂಟೆಗೆ ನಗರದ ಜಿಲ್ಲಾ ಪೊಲೀಸ್ ಕಚೇರಿ ಆವರಣದಲ್ಲಿ ಪೊಲೀಸ್ ಹುತಾತ್ಮರ ದಿನಾಚರಣೆಯನ್ನು ಆಚರಿಸಲಾಗುವುದು. ಕಾರ್ಯಕ್ರಮದಲ್ಲಿ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಬಸವರಾಜ ಹಾಗೂ ಜಿಲ್ಲಾಧಿಕಾರಿ ವೈಶಾಲಿ ಎಂ.ಎಲ್. ಪಾಲ್ಗೊಳ್ಳುವರು. ಪೊಲೀಸ್ ಅಧೀಕ್ಷಕರಾದ ಬಿ.ಎಸ್. ನೇಮಗೌಡ ಸರ್ವರಿಗೂ ಸ್ವಾಗತ ಕೋರಿದ್ದಾರೆ.

## ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

■ವಿಜಯಸಾಕ್ಷಿ ಸುದ್ದಿ, ಗದಗ

2023-24ನೇ ಸಾಲಿಗೆ ಗದಗ ಜಿಲ್ಲೆಯ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ಅಲ್ಪಸಂಖ್ಯಾತ ಸಮುದಾಯದ ಐಐಎಂ, ಐಐಟಿ, ಐಐಎಸ್‌ಸಿ ಮುಂತಾದ ಪ್ರತಿಷ್ಠಿತ ರಾಷ್ಟ್ರೀಯ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ ಹಾಗೂ ಅರ್ಹ ಅಲ್ಪಸಂಖ್ಯಾತರ (ಮುಸ್ಲಿಂ, ಜೈನ್, ಕ್ರಿಶ್ಚಿಯನ್, ಸಿಖ್, ಬೌದ್ಧ, ಪರ್ಶಿಯನ್) ವಿದ್ಯಾರ್ಥಿಗಳು ಸೇವಾ ಸಿಂಧು ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಲು ನವೆಂಬರ್ 30 ಕೊನೆಯ ದಿನವಾಗಿದೆ.

ವಿದ್ಯಾರ್ಥಿಗಳು ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು. ಅಭ್ಯರ್ಥಿಗಳು ಅಲ್ಪಸಂಖ್ಯಾತರ ಸಮುದಾಯಕ್ಕೆ ಸೇರಿರಬೇಕು. ವಿದ್ಯಾರ್ಥಿಯ ಕುಟುಂಬದ ವಾರ್ಷಿಕ ಆದಾಯವು ರೂ.6.00 ಲಕ್ಷ ರೂ ಮೀರಿರಬಾರದು. ಹಿಂದಿನ ವರ್ಷದ ಪರೀಕ್ಷೆಯಲ್ಲಿ ಅನುತ್ತೀರ್ಣರಾದ (ಬ್ಯಾಕ್‌ಲಾಗ್) ವಿದ್ಯಾರ್ಥಿಗಳಿಗೆ ಈ ಪ್ರೋತ್ಸಾಹಧನ ಪಡೆಯುವ ಅವಕಾಶವಿರುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಮೌಲಾನಾ ಆಜಾದ ಭವನ, ಜಿಲ್ಲಾ ನ್ಯಾಯಾಲಯದ ಎದುರುಗಡೆ, ಹುಬ್ಬಳ್ಳಿ ರೋಡ, ಗದಗ ರವರನ್ನು ಕಚೇರಿ ಅವಧಿಯಲ್ಲಿ ಸಂಪರ್ಕಿಸಬಹುದಾಗಿದೆ.

## ಗದಗ-ಬೆಟಗೇರಿಯ ಬೀದಿ ಬದಿ ವ್ಯಾಪಾರಸ್ಥರ ಗಮನಕ್ಕೆ

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ-ಬೆಟಗೇರಿ ನಗರಸಭೆ ವ್ಯಾಪ್ತಿಯಲ್ಲಿ ಬರುವ ಬೀದಿ ಬದಿ ವ್ಯಾಪಾರಸ್ಥರ ಸಮಿತಿಯ ನಿರ್ಣಯದ ಪ್ರಕಾರ ಹಾಗೂ ಪೊಲೀಸ್ ವರದಿಯ ಅಭಿಪ್ರಾಯದ ಮೇರೆಗೆ ನಗರದ ಕೆ.ಎಚ್.ಪಾಟೀಲ ವೃತ್ತದಿಂದ ಪುಟ್ಟರಾಜ ಸರ್ಕಲ್‌ವರೆಗೆ ಹಾಗೂ ಗದಗ ವಾರ್ಡ್ ನಂ.11 ರಿಂದ 35ರ ವರೆಗೆ ಬರುವ ಎಲ್ಲಾ ಬೀದಿ ಬದಿ ವ್ಯಾಪಾರಸ್ಥರನ್ನು ಒಳಪಡುವಂತೆ (ನಗರಸಭೆಯಿಂದ ನಿರ್ಮಿಸಿದ ಮಾರುಕಟ್ಟೆಯಲ್ಲಿ ವ್ಯಾಪಾರ ಮಾಡುತ್ತಿರುವವರನ್ನು ಹೊರತುಪಡಿಸಿ ಗದಗ ಕಾಯಿಪಲ್ಲೆ ಮಾರುಕಟ್ಟೆ) ಹಾಗೂ ಬೆಟಗೇರಿ ಬಸ ನಿಲ್ದಾಣದ ಹತ್ತಿರ ಇರುವ ಕಾಯಿಪಲ್ಲೆ ಮಾರುಕಟ್ಟೆ ಹೊರತುಪಡಿಸಿ ಹೊರಗಿರುವ ರಸ್ತೆ ಬದಿ ಎಲ್ಲಾ ಬೀದಿ ಬದಿ ವ್ಯಾಪಾರಸ್ಥರನ್ನು ಒಳಗೊಂಡಂತೆ (ಬೆಟಗೇರಿ ವಾರ್ಡ್ ನಂ 1 ರಿಂದ 10) ಇವುಗಳನ್ನು ( ಬೀದಿ ಬದಿ ವ್ಯಾಪಾರಸ್ಥರ ಮಾರಾಟ ವಲಯ) ವೆಂಡಿಂಗ ಜೋನ್ ಎಂದು ಘೋಷಿಸಲಾಗಿದೆ. ಈ ಕುರಿತು ಯಾವುದೇ ಆಕ್ಷೇಪಣೆ ಇದ್ದಲ್ಲಿ ಅಕ್ಟೋಬರ್ 30 ರೊಳಗಾಗಿ ಗದಗ-ಬೆಟಗೇರಿ ನಗರಸಭೆಯ ಡೇ-ನಲ್ಮ ವಿಭಾಗಕ್ಕೆ ಸಲ್ಲಿಸುವಂತೆ ಗದಗ-ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

### ಬೀದಿನಾಯಿಗಳ ಉಪಟಳಕ್ಕೆ ಬೆಚ್ಚಿಬಿದ್ದ ನಾಗರಿಕರು । ಮಕ್ಕಳು, ಪ್ರಾಣಿಗಳ ಮೇಲೆ ದಾಳಿ

# ಬೀದಿನಾಯಿ ಹಾವಳಿ ನಿಯಂತ್ರಣಕ್ಕೆ ಆಗ್ರಹ

■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ



ಪಟ್ಟಣ ಸೇರಿದಂತೆ ತಾಲೂಕಿನಾದ್ಯಂತ ಹೆಚ್ಚುತ್ತಿರುವ ಬೀದಿ ನಾಯಿಗಳ ಹಾವಳಿಯಿಂದ ಜನತೆ ಬೆಚ್ಚಿ ಬೀಳುವಂತಾಗಿದ್ದು, ಮಕ್ಕಳನ್ನಷ್ಟೇ ಹೊರಬಿಡದ ಪರಿಸ್ಥಿತಿ ನಿರ್ಮಾಣವಾಗಿದೆ. ಮನೆ ಮುಂದೆ ಆಟ ಆಡುತ್ತಿರುವ ಚಿಕ್ಕ ಮಕ್ಕಳ ಮೇಲೆ ದಾಳಿ ಮಾಡುತ್ತಿವೆ. ಇದಕ್ಕೆ ನಿತ್ಯವೂ ಒಂದಿಲ್ಲೊಂದು ಕಡೆ ನಾಯಿ ಕಡಿತದಿಂದ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಯಲ್ಲಿ ಸಾರ್ವಜನಿಕರು ಚಿಕಿತ್ಸೆಗೊಳಪಡುವ ಘಟನೆ ನಡೆಯುತ್ತಲೇ ಇದೆ.

**ಪೇಪರ್-ಹಾಲು ಹಾಕುವವರಿಗೆ ತಪ್ಪದ ಗೋಳು:** ಹಿಂಡು ನಾಯಿಗಳ ಬೀದಿ ಕಡಿದಾಟ, ಕೂಗಾಟ, ಓಟಾಟದ ಭಯದಿಂದ ಪಾಲಕರು ಮಕ್ಕಳನ್ನು ಶಾಲೆಗೆ, ಆಟಕ್ಕೆ, ಸೈಕಲ್ ಓಡಿಸಲು ಬಿಡಲು ಹೆದರುತ್ತಿದ್ದಾರೆ. ಅಲ್ಲದೇ ಹಾಲು, ಪೇಪರ್, ಹೂವು, ಹಣ್ಣು, ತರಕಾರಿ ಮಾರಾಟಗರರು ಬೆದರುವಂತಾಗಿದೆ. ರಾತ್ರಿ ಮತ್ತು ನಸುಕಿನ ಜಾವ ಸಂಚಾರದ ವೇಳೆ ಒಂದು ನಾಯಿ ಬೊಗಳಿದರೆ ಆ ಪ್ರದೇಶ ಎಲ್ಲ ನಾಯಿಗಳೂ ಬೊಗಳುತ್ತಾ ಸುತ್ತುವರಿಯುತ್ತವೆ. ಬೈಕ್ ಸವಾರರನ್ನು ಬೆನ್ನಟ್ಟುವ ನಾಯಿಗಳಿಂದ ಪಾರಾಗಲು ಸವಾರರು ಅಪಘಾತಕ್ಕೀಡಾಗುತ್ತಿದ್ದಾರೆ. ಮಕ್ಕಳು ಏನಾದರೂ ತಿಂಡಿ-ತಿನಿಸುಗಳನ್ನು ತರುತ್ತಿದ್ದರೆ ಅವರ ಮೇಲೆ ಎರಗುತ್ತವೆ. ವಾಯು ವಿಹಾರಿಗಳು, ಮಹಿಳೆಯರು, ಮಕ್ಕಳು, ವಯೋವೃದ್ಧರು ಎಲ್ಲರಲ್ಲೂ ನಾಯಿಗಳ ಭಯ ಕಾಡುತ್ತಿದೆ.

ಬೀದಿ ನಾಯಿಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇವೆ. ಕಾರಣ ಪಟ್ಟಣದ ಬಹುತೇಕ ರಸ್ತೆ ಬದಿಗಳ ಬದಿ, ಜನನಿಬಿಡ ಪ್ರದೇಶ, ಬಸ್-ಆಟೋ ನಿಲ್ದಾಣಗಳ ಪ್ರದೇಶಗಳಲ್ಲಿ ನಾಯಿ ಕೊಡೆಗಳಂತೆ ತಲೆ ಎತ್ತಿರುವ ಚಿಕನ್-ಎಗ್‌ರೈಸ್ ಸೆಂಟರ್, ಬೇಕರಿ, ಮಾಂಸ ಮಾರಾಟದ ಅಂಗಡಿಗಳು, ಗೂಡಂಗಡಿಗಳು, ಹೋಟೆಲ್-ದಾಬಾಗಳು ಅಷ್ಟೇ ಅಲ್ಲದೇ ಸಾರ್ವಜನಿಕರು ಅಲ್ಲಲ್ಲಿ ಚೆಲ್ಲುವ ಆಹಾರ ಪದಾರ್ಥ ಬೀದಿ ನಾಯಿಗಳಿಗೆ ಯಥೇಚ್ಛ ಆಹಾರ ನೀಡುವ ಮೂಲಗಳಾಗಿವೆ.

**ಪ್ರಾಣಿಗಳ ಬೇಟೆಗೆ ನಾಯಿ ದಂಡು ಸನ್ನದ್ಧ!:** ಇದೀಗ ಮಾಂಸದ ರುಚಿಗೆ ಬೆನ್ನತ್ತಿರುವ ಬೀದಿ ನಾಯಿಗಳು ಪಟ್ಟಣದಲ್ಲಿ ಸಣ್ಣ ಬೆಕ್ಕು, ಹಂದಿಮರಿ, ಕೋಳಿ ಮರಿಗಳನ್ನು ಹಿಡಿದು ತಿಂ-ದು ಹಾಕುತ್ತಿವೆ. ಹೊರವಲಯದ ರೈತರ ಜಮೀನುಗಳಲ್ಲಿ ನಾಯಿಗಳ ಹಿಂಡು ಬೇಕಾಬಿಟ್ಟಿ ಓಡಾಡಿ ಬೆಳೆ ಹಾನಿ ಮಾಡುತ್ತಿವೆ. ಸಾಲದ್ದಕ್ಕೆ ಜಮೀನಿನಲ್ಲಿ ಬರುವ ಜಿಂಕೆ, ನರಿ, ಮೊಲಗಳಂತಹ ಸಣ್ಣ ಪ್ರಾಣಿಗಳನ್ನು ಬೇಟೆಯಾಡುವ ಬೀದಿ ನಾಯಿಗಳಿಂದ ಜನತೆಯ ನೆಮ್ಮದಿ ಹಾಳಾಗಿರುವುದಂತೂ ಸತ್ಯ. ನಾಯಿಗಳ ಹಾವಳಿಯಿಂದ ಹಂದಿಗಳ ಕಾಟ ಕಡಿಮೆಯಾಗಿದ್ದರೂ, ನಾಯಿ ಚೆಲ್ಲಾಟದಿಂದ ರೈತರಿಗೂ ಪ್ರಾಣ ಸಂಕಟವಾಗಿದೆ.

**ನಿಯಂತ್ರಣಕ್ಕೆ ಬೇಕಿದೆ ಇಚ್ಛಾಶಕ್ತಿ:** ಹೆಚ್ಚುತ್ತಿರುವ ಬೀದಿ ನಾಯಿಗಳ ಸಂಖ್ಯೆಯ ನಿಯಂತ್ರಣಕ್ಕೆ ಸಂತಾನ ಹರಣ ಚಿಕಿತ್ಸೆಯೂ ಸೇರಿ, ಕೈಗೊಳ್ಳಬೇಕಾದ ನಿಯಂತ್ರಣ ಕ್ರಮಗಳ ಬಗ್ಗೆ ಸ್ಥಳೀಯ ಪುರಸಭೆ, ಗ್ರಾ.ಪಂನವರು ತಲೆ ಕೆಡಿಸಿಕೊಂಡಿಲ್ಲ. ಇದರಿಂದ ಅವುಗಳ ಸಂಖ್ಯೆ ದುಪ್ಪಟ್ಟಾಗಿದ್ದು, ಈಗ ಇಡೀ ವಾತಾವರಣವನ್ನೆ ಹದಗೆಡಿಸಿದೆ. ಈ ಬಗ್ಗೆ ಸಾರ್ವಜನಿಕರು ಅನೇಕ ಬಾರಿ ಮೌಖಿಕವಾಗಿ ಮತ್ತು ಲಿಖಿತವಾಗಿ ಪುರಸಭೆಗೆ ಮನವಿ ಮಾಡಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಪಟ್ಟಣದ ಜನರ, ಮಕ್ಕಳ ಜೀವದ ದೃಷ್ಟಿಯಿಂದ ಬೀದಿ ನಾಯಿಗಳ ಸಂಖ್ಯೆ ನಿಯಂತ್ರಣ ಮಾಡಬೇಕಿದೆ ಎನ್ನುತ್ತಾರೆ ತಾಲೂಕು ಪಂಚಮಸಾಲಿ ಸಂಘದ ಅಧ್ಯಕ್ಷ ಮಂಜುನಾಥ ಮಾಗಡಿ.

> ಪಟ್ಟಣದಲ್ಲಿ ಬೀದಿ ನಾಯಿಗಳ ಹಾವಳಿ ನಿಯಂತ್ರಣಕ್ಕೆ ಪಶು ಸಂಗೋಪನಾ ಇಲಾಖೆಯೊಂದಿಗೆ ಚರ್ಚಿಸಿ ಸಂತಾನ ಹರಣ ಶಸ್ತ್ರ ಚಿಕಿತ್ಸೆ, ಸ್ಥಳಾಂತರ ಸೇರಿ ಇತರೇ ಕ್ರಮಗಳನ್ನು ಕೈಗೊಳ್ಳುವ ಬಗ್ಗೆ ಚರ್ಚಿಸಲಾಗುವುದು. ಸಾರ್ವಜನಿಕರು ಸಾಕು ನಾಯಿಗಳ ಕೊರಳಿಗೆ ಬೆಲ್ಟ್ ಕಟ್ಟಿ ದಿನಪೂರ್ತಿ ಮನೆಯಿಂದ ಹೊರಬಿಡದಂತೆ ಕ್ರಮ ಕೈಗೊಳ್ಳಬೇಕು. ಸಾರ್ವಜನಿಕರು, ಹೋಟೆಲ್-ದಾಬಾ, ಬೀದಿಬದಿ ವ್ಯಾಪಾರಸ್ಥರು ಆಹಾರ-ಪದಾರ್ಥಗಳನ್ನು ರಸ್ತೆ ಬದಿ ಚೆಲ್ಲದಂತೆ ಸೂಚಿಸಲಾಗುವುದು.
>
> **- ಮಂಜುನಾಥ ಮುದಗಲ್.**
> ಆರೋಗ್ಯ ನಿರೀಕ್ಷಕರು, ಪುರಸಭೆ-ಲಕ್ಷ್ಮೇಶ್ವರ.

> ಲಕ್ಷ್ಮೇಶ್ವರ ಸಮುದಾಯ ಆರೋಗ್ಯ ಕೇಂದ್ರ ಮತ್ತು ತಾಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರ ವ್ಯಾಪ್ತಿಯಲ್ಲಿ ತಿಂಗಳೊಂದಕ್ಕೆ 70ಕ್ಕೂ ಹೆಚ್ಚು ಬೀದಿನಾಯಿ ಕಡಿತದ ಪ್ರಕರಣಗಳು ದಾಖಲಾಗುತ್ತಿವೆ. ಇದರಲ್ಲಿ ಬಹುತೇಕ ಚಿಕ್ಕ ಮಕ್ಕಳೇ ಇರುತ್ತಾರೆ. ನಾಯಿಕಡಿತಕ್ಕೆ ಅವಶ್ಯಕ ಔಷದಿಯ ಲಭ್ಯತೆಯಿದೆ.
>
> **- ಡಾ.ಶ್ರೀಕಾಂತ ಕಾಟೇವಾಲೆ.**
> ಲಕ್ಷ್ಮೇಶ್ವರ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ.

## ಮಕ್ಕಳ ಜೀವನ ಕೌಶಲ್ಯ ಶಿಬಿರದ ಸಮಾರೋಪ



■ವಿಜಯಸಾಕ್ಷಿ ಸುದ್ದಿ, ಗದಗ

ಎಂ.ಕೆ ಕೊರ್ಲಹಳ್ಳಿ ಫೌಂಡೇಶನ್ ಟ್ರಸ್ಟ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಗದಗ, ಕರ್ನಾಟಕ ಬಾಲ ವಿಕಾಸ ಅಕಾಡೆಮಿ ಧಾರವಾಡ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಸರ್ಕಾರಿ ಬಾಲಕರ ಮತ್ತು ಬಾಲಕಿಯರ ಬಾಲ ಮಂದಿರ ಇವರ ಸಂಯುಕ್ತ ಆಶ್ರಯದಲ್ಲಿ 'ಮಕ್ಕಳಿಗೆ ಜೀವನ ಕೌಶಲ್ಯ ತರಬೇತಿ' ಹಮ್ಮಿಕೊಳ್ಳಲಾಗಿತ್ತು.

ತರಬೇತಿಯ ಸಮಾರೋಪ ಸಮಾರಂಭದ ಉದ್ಘಾಟನೆಯನ್ನು ಅಪರ ಜಿಲ್ಲಾ ಅಧಿಕಾರಿ ಅನ್ನಪೂರ್ಣ ಮುದುಕಮ್ಮನವರ, ಹಿರಿಯ ದಿವಾಣಿ ನ್ಯಾಯಾಧೀಶ ಕೆ. ಗುರುಪ್ರಸಾದ ನೆರವೇರಿಸಿ, ಮಕ್ಕಳು ರಚಿಸಿರುವ ವಿವಿಧ ಕಲಾಕೃತಿಗಳನ್ನು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು.

ಮುಖ್ಯ ಅತಿಥಿಗಳಾಗಿ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ರಾಧಾ ಜಿ.ಮಣ್ಣೂರ್, ಸಿಡಿಪಿಯು ಹುಲಿಗೆವ್ವ ಜೋಗೇರ, ಮಕ್ಕಳ ಕಲ್ಯಾಣ ಸಮಿತಿಯ ಅನ್ನಪೂರ್ಣ ಗಾಣಿಗೇರ್, ಸರ್ಕಾರಿ ಬಾಲಕಿಯರ ಬಾಲ ಮಂದಿರದ ಅಧೀಕ್ಷಕಿ ಲಕ್ಷ್ಮೀ ಬಾಗೇವಾಡಿ, ಸರಕಾರಿ ಬಾಲಕರ ಬಾಲ ಮಂದಿರದ ಅಧೀಕ್ಷಕಿ ಗಿರಿಜಾ ದೊಡ್ಡಮನಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ನಿರ್ಮಲಾ ಚಿಕ್ಕಣ್ಣವರ, ಎಮ್.ಕೆ ಕೊರ್ಲಹಳ್ಳಿ ಫೌಂಡೇಶನ್ ಟ್ರಸ್ಟ್‌ನ ಉಪಾಧ್ಯಕ್ಷರಾದ ಅನುಪಮಾ ಹಿರೇಗೌಡರ, ಸಾಹೇರಾ ಕೊರ್ಲಹಳ್ಳಿ ಆಗಮಿಸಿದ್ದರು.

ಶಿಬಿರದ ತರಬೇತಿ ನೀಡಿದ ಪ್ರದೀಪಕುಮಾರ, ಮಾಲನ ಸುಂಕದ, ಗಣೇಶ್‌ಸಿಂಗ್ ದೊಡ್ಡಮನಿ, ಮಾಲಾ ತಂಬ್ರಳ್ಳಿ ಹಾಗೂ ಸರ್ಕಾರಿ ಬಾಲಕರ ಬಾಲಮಂದಿರದ ಹಳೆಯ ವಿದ್ಯಾರ್ಥಿ ಗೋಪಾಲ ಇವರನ್ನು ಸನ್ಮಾನಿಸಲಾಯಿತು ಯಲ್ಲಾಲಿಂಗ ಕತ್ತಿ ಕಾರ್ಯಕ್ರಮ ನಿರೂಪಿಸಿದರು. ಕಾರ್ಯಕ್ರಮದಲ್ಲಿ ಶಿಬಿರದ ಸಂಚಾಲಕರಾದ ಡಾ. ಜಾಕೀರಹುಸೇನ ಎಂ.ಕೊರ್ಲಹಳ್ಳಿ, ಮಕ್ಕಳ ರಕ್ಷಣಾ ಘಟಕದ ಸಿಬ್ಬಂದಿ ವರ್ಗ, ಸರ್ಕಾರಿ ಬಾಲಕರ ಮತ್ತು ಬಾಲಕಿಯರ ಬಾಲ ಮಂದಿರದ ಸಿಬ್ಬಂದಿ ವರ್ಗದವರು ಪಾಲ್ಗೊಂಡಿದ್ದರು.

## ದೀಪದ ಮುಂದೆ ಎಲ್ಲರೂ ಸಮಾನರು

■ವಿಜಯಸಾಕ್ಷಿ ಸುದ್ದಿ, ನರೇಗಲ್ಲ



ಪಟ್ಟಣದ ಶ್ರೀ ಕಲ್ಮೇಶ್ವರ ದೇವಸ್ಥಾನದಲ್ಲಿ ಬುಧವಾರ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಗ್ರಾಮ ವಿಕಾಸ ಕಾರ್ಯಕ್ರಮದಡಿಯಲ್ಲಿ ಮಾತೃ ಮಂಡಳಿ ವತಿಯಿಂದ 'ದೀಪ ಪೂಜನಂ' ಕಾರ್ಯಕ್ರಮ ನೆರವೇರಿತು.

ಪೂಜಾ ಕಾರ್ಯಕ್ರಮವನ್ನು ಉತ್ತರ ಪ್ರಾಂತ ಸಂಚಾಲಕ ಸಂಜೀವಕುಮಾರ ಭೋಸಗೇಕರ ಅಚ್ಚುಕಟ್ಟಾಗಿ ನಡೆಸಿಕೊಟ್ಟರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ದೀಪವು ನಮ್ಮಲ್ಲಿನ ದುರ್ಗುಣಗಳನ್ನು ದೂರ ಮಾಡುತ್ತದೆ. ದೀಪದ ಮುಂದೆ ಎಲ್ಲರೂ ಸಮಾನರು. ದೀಪವನ್ನು ಬೆಳಗಿಸುವುದರಿಂದ ಬರೀ ಕತ್ತಲೆ ಓಡಿ ಹೋಗುವ ಬದಲಿಗೆ ನಮ್ಮ ಮನದ ಅಂಧಕಾರವನ್ನೂ ದೂರವಾಗಿಸುವ ಶಕ್ತಿಯಿದೆ. ದೀಪ ಬೆಳಗುವದರಿಂದ ಸಂಪತ್ತು ಸಿಗುತ್ತದೆ. ದೀಪದ ಪೂಜೆಯಿಂದ ಆ ಸಂಪತ್ತು ವೃದ್ಧಿಯಾಗುತ್ತದೆ. ಹೀಗಾಗಿ, ದೀಪವನ್ನು ಲಕ್ಷ್ಮಿ ಎಂದೂ ಕರೆಯಲಾಗುತ್ತದೆ ಎಂದರು.

ಮಾತೃ ಮಂಡಳಿಯ ಜಿಲ್ಲಾ ಸಂಯೋಜಕಿ ನಾಗವೇಣಿ ಕಟ್ಟಿಮನಿ ಮಾತನಾಡಿ, ಬರುವ ಡಿಸೆಂಬರ್ 3ರಂದು ಮಾತೃ ಮಂಡಳಿಯ ವತಿಯಿಂದ ಹುಬ್ಬಳ್ಳಿಯಲ್ಲಿ ಸಮಾವೇಶವನ್ನು ಹಮ್ಮಿಕೊಳ್ಳಲಾಗಿದ್ದು, ಈ ಸಮಾವೇಶಕ್ಕೆ ಸುಧಾ ಮೂರ್ತಿಯವರನ್ನು ಆಹ್ವಾನಿಸಲಾಗಿದೆ. ನೀವೆಲ್ಲರೂ ಬಂದು ಸಮಾವೇಶದಲ್ಲಿ ಪಾಲ್ಗೊಳ್ಳಿ ಎಂದರು.

ಶಿರಹಟ್ಟಿಯ ನಟರಾಜ, ಗದಗನ ಅಶ್ವಿನಿ ಜಗತಾಪ, ಸುನಂದಕ್ಕ, ಗಂಗಮ್ಮ ದೇವರಮನಿ, ಅರ್ಚನಾ ಕುಲಕರ್ಣಿ, ಗಂಗಾ, ಸುಜಾತಾ ಸಂಗನಾಳಮಠ, ಕಾವ್ಯಾ, ಸೀಮಾ ಕೊಂಡಿ, ಗೀತಾ ಪತ್ತಾರ ಮುಂತಾದವರು ದೀಪ ಪೂಜನಂ ಕಾರ್ಯಕ್ರಮದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು. ಕಾರ್ಯಕ್ರಮದಲ್ಲಿ ಸ್ವಗ್ರಾಮ ಫೆಲೋಶಿಪ್‌ನ ಚನ್ನಬಸಪ್ಪ ಕುಷ್ಟಗಿ, ಸುರೇಶ ಅಂಕದ, ಗ್ರಾಮ ವಿಕಾಸನ ಸದಸ್ಯರಾದ ಜಗದೀಶ ಸಂಕನಗೌಡ್ರ, ಶಿವನಗೌಡ ಪಾಟೀಲ, ಈಶ್ವರ ಬೆಟಗೇರಿ, ಆನಂದ ಕುಲಕರ್ಣಿ, ಶಶಿಧರ ಓದಸುಮಠ, ನರೇಶ ಜೋಳದ, ಚಂದ್ರು ವಂಕಲಕುಂಟಿ, ಈರಣ್ಣ ಚವಡಿ, ಚಂದ್ರು ಹೊನವಾಡ, ವೆಂಕಣ್ಣ ವೈದ್ಯ, ಶಿವಾನಂದ ಇಟಗಿ, ಮಾತೃ ಮಂಡಳಿಯ ಸದಸ್ಯರು ಭಾಗವಹಿಸಿದ್ದರು. ರಘುನಾಥ ಕೊಂಡಿ ನಿರ್ವಹಿಸಿದರು.

## ಎಸ್‌ಎಸ್‌ಕೆ ದಸರಾ ಉತ್ಸವದ ಕಾರ್ಯಕ್ರಮ

■ವಿಜಯಸಾಕ್ಷಿ ಸುದ್ದಿ, ಗದಗ




ಎಸ್‌ಎಸ್‌ಕೆ ದಸರಾ ಉತ್ಸವ ಸಮಿತಿ ವತಿಯಿಂದ ಶುಕ್ರವಾರ ಸಾಯಂಕಾಲ 6 ಗಂಟೆಗೆ ಎಸ್‌ಎಸ್‌ಕೆ ಸಮಾಜದ ಮಹಿಳೆಯರಿಗಾಗಿ ಒಡಪು ಹೇಳುವ ಸ್ಪರ್ಧೆ, ಫ್ಯಾನ್ಸಿ ಸ್ಯಾರಿ ಸ್ಪರ್ಧೆ, 7 ಗಂಟೆಗೆ ಸಮಾಜದ ಬಾಲಕ-ಬಾಲಕಿಯರಿಗಾಗಿ ಡ್ಯಾನ್ಸ್ ಡ್ಯಾನ್ಸ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬೆಟಗೇರಿ ಶ್ರೀ ಜಗದಂಬಾ ಮಹಿಳಾ ಮಂಡಳದ ಉಪಾಧ್ಯಕ್ಷೆ ರೂಪಾ ಪಿ.ಮಿಸ್ಕಿನ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ವೀಣಾ ಕೆ.ಮೇರವಾಡೆ ಹಾಗೂ ಶೋಭಾ ಟಿ.ಮೇರವಾಡೆ ಆಗಮಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

## ಪಂಚಾಯಿತಿ ಕಟ್ಟಡವನ್ನು ಕಾಡಿದ 'ವಾಸ್ತು ಪ್ರಕಾರ'!

▶▶ಮೊದಲನೇ ಪುಟದಿಂದ



ಸಿ.ಸಿ ಕ್ಯಾಮರಾ ಸೇರಿದಂತೆ ಅನೇಕ ಕೆಲಸಕ್ಕೆ ಸಾಮಾನ್ಯ ಸಭೆಯಲ್ಲಿ ಎಲ್ಲರ ನಿರ್ಣಯ ತೆಗೆದುಕೊಂಡು ಮಾಡಲಿದೆ ಎಂದು ಗ್ರಾ.ಪಂ ಸದಸ್ಯ ಪ್ರವೀಣ ಸೂರಣಗಿ ಹೇಳುತ್ತಿದ್ದಾರೆ. ಕಟ್ಟಡದ ದುರಸ್ತಿ ಹೆಸರಿನಲ್ಲಿ ವಾಸ್ತು ಪ್ರಕಾರ ಕಟ್ಟಡ ಇಲ್ಲ ಎಂದು ಹೊಸ ಬಾಗಿಲು ಸೃಷ್ಟಿ ಮಾಡಲಾಗಿದೆ. ಇದಕ್ಕೆ ಗ್ರಾ.ಪಂ.ನ ಎಲ್ಲಾ ಸದಸ್ಯರ ಒಪ್ಪಿಗೆ ತೆಗೆದುಕೊಳ್ಳದೆ ಅಧ್ಯಕ್ಷರು ಹಾಗೂ ಕೆಲವೇ ಸದಸ್ಯರು ಮಾತ್ರ ದುರಸ್ತಿ ಹೆಸರಿನಲ್ಲಿ ಕಟ್ಟಡ ಹಾಳು ಮಾಡುತ್ತಿದ್ದಾರೆ ಎಂದು ಉಪಾಧ್ಯಕ್ಷ ಶಂಕ್ರಣ್ಣ ಶಿರನಹಳ್ಳಿ ಆರೋಪಿಸಿದ್ದಾರೆ.

ಸೂರಣಗಿ ಗ್ರಾಮ ಪಂಚಾಯಿತಿ ಭೇಟಿ ನೀಡಿ ಅಲ್ಲಿನ ಅಧಿಕಾರಿಗಳು ಮಾಹಿತಿ ಪಡೆದು ಪರಿಶೀಲನೆ ಮಾಡಲಾಗುವದು ಎಂದು ಪ್ರಭಾರ ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿ ಕೃಷ್ಣಪ್ಪ ಧರ್ಮರ ಹೇಳಿದ್ದಾರೆ.

### ರಾಜ್ಯ ಕಬ್ಬು ಬೆಳೆಗಾರರ ಸಂಘದ ವೀರನಗೌಡ ಪಾಟೀಲ ಆಗ್ರಹ

# ರೈತರಿಗೆ ಆಗುತ್ತಿರುವ ಅನ್ಯಾಯ ಸರಿಪಡಿಸಿ

■ವಿಜಯಸಾಕ್ಷಿ ಸುದ್ದಿ, ಮುಂಡರಗಿ



ಕೇಂದ್ರ ಸರ್ಕಾರ ಪ್ರತಿ ಟನ್ ಕಬ್ಬಿಗೆ ಎಫ್‌ಆರ್‌ಪಿ ದರಕ್ಕಿಂತ ಹೆಚ್ಚುವರಿಯಾಗಿ 500 ರೂ. ಹೆಚ್ಚುವರಿಯಾಗಿ ನೀಡಬೇಕು, ಕಬ್ಬು ಬೆಳೆಗಾರರ ಮತ್ತಿತರ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಅ.21ರಂದು ಬೆಳಗ್ಗೆ 10 ಗಂಟೆಗೆ ಗಂಗಾಪುರ ವಿಜಯನಗರ ಸಕ್ಕರೆ ಕಾರ್ಖಾನೆ ಮುಂದೆ ಬೃಹತ್ ಪ್ರತಿಭಟನೆ ನಡೆಸಲಾಗುವುದು ಎಂದು ರಾಜ್ಯ ಕಬ್ಬು ಬೆಳೆಗಾರರ ಸಂಘದ ಕಾರ್ಯಾಧ್ಯಕ್ಷ ವೀರನಗೌಡ ಪಾಟೀಲ ತಿಳಿಸಿದರು.

ಪಟ್ಟಣದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2023-24ನೇ ಸಾಲಿಗೆ ಕೇಂದ್ರ ಸರ್ಕಾರವು ಕಬ್ಬಿನ 10.25 ರಿಕವರಿಗೆ ಪ್ರತಿಟನ್ ಕಬ್ಬಿಗೆ 3,150ರೂ. ನಿಗದಿ ಮಾಡಿದೆ. ಗಂಗಾಪುರ ವಿಜಯನಗರ ಸಕ್ಕರೆ ಕಾರ್ಖಾನೆಯು 9.78 ರಿಕವರಿ ಕೊಟ್ಟಿದ್ದು, ಪ್ರತಿಟನ್ ಕಬ್ಬಿಗೆ 3,006ರೂ. ನಿಗದಿ ಮಾಡಿದೆ. ಈ ಬಾರಿ ಕೇಂದ್ರ ಸರ್ಕಾರದ ಕಬ್ಬಿನ ಎಫ್‌ಆರ್‌ಪಿ ದರಕ್ಕಿಂತ ಹೆಚ್ಚುವರಿ 500ರೂ. ನೀಡಬೇಕು ಎಂದು ಒತ್ತಾಯಿಸಿದರು.

ವಿಜಯನಗರ ಸಕ್ಕರೆ ಕಾರ್ಖಾನೆಯಿಂದ ಕಬ್ಬಿನ ರಿಕವರಿಯಲ್ಲಿ ರೈತರಿಗೆ ವಂಚನೆಯಾಗಿದೆ ಎಂದು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ಕಾರ್ಖಾನೆಯವರ ಹಾಗೂ ರೈತರ ಸಭೆ ನಡೆಸಿದ್ದರು. ಆಗ ಕಾರ್ಖಾನೆಯವರು ರೈತರ ಜಮ್ಮಿನಿಗೆ ತೆರಳಿ ಅಲ್ಲಿಯೇ ಕಬ್ಬಿನ ರಿಕವರಿ ತಿಳಿಸಿ ನಿಗದಿತ ಸ್ಥಳದಲ್ಲಿ ದರ ನಿಗದಿಪಡಿಸಬೇಕು, ಪ್ರತಿಟನ್ ಕಬ್ಬಿಗೆ 3,006 ಬದಲಾಗಿ, 3,506 ರೂ. ಹೆಚ್ಚುವರಿ ನೀಡಬೇಕು ಎಂದು ಮನವಿ ಮಾಡಿದ್ದೇವು. ಆಗ ಕಾರ್ಖಾನೆಯವರು ಎಂ.ಡಿ ಅವರೊಂದಿಗೆ ಚರ್ಚಿಸಿ ತಿಳಿಸಲಾಗುವುದು ಎಂದಿದ್ದರು. ಆದರೀಗ ಕೇಂದ್ರ ಸರ್ಕಾರದ ಎಫ್‌ಆರ್‌ಪಿ ದರಕ್ಕಿಂತ ಹೆಚ್ಚುವರಿ ನೀಡಲು ಸಾಧ್ಯವಿಲ್ಲ ಎಂದಿದ್ದಾರೆ ಎಂದು ಮಾಹಿತಿ ನೀಡಿದರು. ರಾಜ್ಯದ ರೈತರು ಬರಗಾಲದಿಂದ ಕುಗ್ಗಿದ್ದಾರೆ. ವಿದ್ಯತ್ ಸಮಸ್ಯೆ ಇತ್ಯಾದಿ ತೊಂದರೆಗಳಿಂದ ರೈತರಿಗೆ ಆಗುತ್ತಿರುವ ಅನ್ಯಾಯ ಸರಿಪಡಿಸಬೇಕು ಎಂದು ಹೇಳಿದರು.

ರವಿ ಕೊಳಲು, ಪ್ರಕಾಶ ಸಜ್ಜನರ, ನಿಂಗಪ್ಪ ಬಂಗಿ, ಈರಣ್ಣ ಕವಲೂರು, ಶಿವಪುತ್ರಪ್ಪ ಪೂಜಾರ, ರವಿಕುಮಾರ ದೊಡ್ಡಮನಿ, ಹಾಲೇಶ ಬೆನ್ನೂರ, ಸಂತೋಷ ಹಳ್ಳಿ, ಪ್ರವೀಣ ಹಂಚಿನಾಳ, ಮಹಾದೇವಪ್ಪ ಹುಳಕಣ್ಣವರ, ಹುಲಗಪ್ಪ ಚೌಡಕಿ, ಎಚ್.ಬಿ ಕುರಿ, ಶಿವು ಮುಕ್ಕಣ್ಣವರ ಸಿದ್ದಪ್ಪ ಹಳ್ಳಿ ಅಂದಪ್ಪ ಮೇಟಿ ಮತ್ತಿತರರು ಇದ್ದರು.

> ವಿವಿಧ ಜಿಲೆಗಳಿಂದ ಆಗಮಿಸಿದ ಕಬ್ಬು ಬೆಳೆಗಾರರ ರೈತರೊಂದಿಗೆ ಚರ್ಚಿಸಿ ಅವರ ಅಭಿಪ್ರಯಾದಂತೆ ಬೆಂಬಲ ಸೂಚಿಸಿದ್ದಾರೆ. ಅವರೊಂದಿಗೆ ಪ್ರತಿಭಟನೆ ಮಾಡಲಾಗುವುದು ಮತ್ತು ಈ ಭಾಗದ ಎಲ್ಲ ರೈತರು ಪ್ರತಿಭಟನೆಯಲ್ಲಿ ಪಾಲ್ಗೊಳಬೇಕು ಎಂದು ವೀರನಗೌಡ ಪಾಟೀಲ ಮನವಿ ಮಾಡಿದರು.

## ವಸತಿರಹಿತರ ಅನಿರ್ದಿಷ್ಟ ಹೋರಾಟ 4ನೇ ದಿನಕ್ಕೆ

■ವಿಜಯಸಾಕ್ಷಿ ಸುದ್ದಿ, ಗದಗ



ಸ್ಲಂ ಜನಾಂದೋಲನ-ಕರ್ನಾಟಕ ಮತ್ತು ಗದಗ ಜಿಲ್ಲಾ ಸ್ಲಂ ಸಮಿತಿಯ ನೇತೃತ್ವದಲ್ಲಿ ಗದಗ-ಬೆಟಗೇರಿಯ ನೈಜ್ ವಸತಿರಹಿತ ಕುಟುಂಬಗಳಿಗೆ ಮನೆಗಳ ಹಂಚಿಕೆ ಆಗ್ರಹಿಸಿ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಕಳೆದ 4 ದಿನಗಳಿಂದ ಹೋರಾಟ ನಡೆಸುತ್ತಿದ್ದರೂ ಸಹ ನಮ್ಮ ಭಾಗದ ಜನಪ್ರತಿನಿಧಿಗಳು ಹಾಗೂ ಜಿಲ್ಲಾಡಳಿತ ವಸತಿರಹಿತರ ಬೇಡಿಕೆಗಳನ್ನು ಈಡೇರಿಸದಿರುವ ಕ್ರಮವನ್ನು ದಲಿತ ಸಂಘರ್ಷ ಸಮಿತಿ ಖಂಡಿಸಿದೆ.

ಈ ಸಂದರ್ಭದಲ್ಲಿ ವಾಸು ಹುಣಿಶಿಮರದ ವೆಂಕಟೇಶಯ್ಯ ಮಾತನಾಡಿ, ವಸತಿರಹಿತ ಕುಟುಂಬಗಳಿಗೆ ನ್ಯಾಯ ಸಿಗುವವರೆಗೂ ಗದಗ ಜಿಲ್ಲಾ ದಲಿತ ಸಂಘರ್ಷ ಸಮಿತಿಯಿಂದ ಬೆಂಬಲ ನೀಡಿ ಹೋರಾಟ ನಡೆಸಲಾಗುವುದು ಎಂದರು. ಗದಗ ಜಿಲ್ಲಾ ಸ್ಲಂ ಸಮಿತಿ ಜಿಲ್ಲಾಧ್ಯಕ್ಷ ಇಮ್ತಿಯಾಜ ಆರ್. ಮಾನ್ವಿ, ಕಾರ್ಯದರ್ಶಿ ಅಶೋಕ. ಎಸ್ ಕುಸಬಿ, ಅಶೋಕ ಕುಡತಿನಿ, ಪೌರಕಾರ್ಮಿಕ ಸಂಘಟನೆಯ ಮುಖಂಡರಾದ ರಾಮು.ಪಿ ಬಳ್ಳಾರಿ, ವಸತಿರಹಿತ ಹೋರಾಟ ಸಮಿತಿಯ ಪರವೀನಬಾನು ಹವಾಲ್ದಾರ, ಜಾಫರ ಢಾಲಾಯತ, ವಂದನಾ ಶ್ಯಾವಿ, ಮಕ್ತುಮಸಾಬ ಮುಲ್ಲಾನವರ, ಮರ್ದಾನಬಿ ಬಳ್ಳಾರಿ, ಕಮಲವ್ವ ಚಲವಾದಿ, ಮೆಹರುನಿಸಾ ಢಾಲಾಯತ, ಸಲೀಂ ಕದಡಿ, ಕವಿತಾ ಶ್ಯಾವಿ, ನಜಮುನಿಸಾ ಮುರಗೋಡ, ದ್ಯಾಮಣ್ಣ ಡೋಣಿ, ಶಾಜನಬಿ ಕರ್ನಾಚಿ, ಖಾಜಾಸಾಬ ಇಸ್ಮಾಯಿಲನವರ, ವಿಶಾಲಾಕ್ಷಿ ಹಿರೇಗೌಡ್ರ ಹಾಗೂ ನೂರಾರು ವಸತಿರಹಿತರು ಸ್ಲಂ ನಿವಾಸಿಗಳು ಧರಣಿಯಲ್ಲಿ ಭಾಗವಹಿಸಿದ್ದರು.



ಗದಗ ಜಿಲ್ಲಾ ವಾಣಿಜ್ಯೋದ್ಯಮ ಸಂಸ್ಥೆಯ 'ಶ್ರೇಷ್ಠ ಉದ್ಯಮಿ' ಪ್ರಶಸ್ತಿ ಪಡೆದ ಲಕ್ಷ್ಮೇಶ್ವರದ ಗಣ್ಯ ವ್ಯಾಪಾರಸ್ಥರಾದ ಬಸವರಾಜ ಶಂಕ್ರಪ್ಪ ಹುಡೇದರನ್ನು ಲಕ್ಷ್ಮೇಶ್ವರ ವರ್ತಕ ಸಂಘದಿಂದ ಸನ್ಮಾನಿಸಲಾಯಿತು. ಸಂಘದ ಅಧ್ಯಕ್ಷ ಓಂ ಪ್ರಕಾಶ ಜೈನ್, ಕಾರ್ಯದರ್ಶಿ ಎಸ್.ಕೆ ಕಾಳಪ್ಪನವರ, ಸೋಮು ಉಪನಾಳ, ಚಂಬಣ್ಣ ಬಾಳಿಕಾಯಿ, ಸುಭಾಷ್ ಓದುನವರ, ಬಸವರಾಜ್ ನರಗಲ್, ಎಸ್.ಕೆ ಕಾಳಪ್ಪನವರ, ಗೌತಮ್ ಮುಥಾ, ತೋಂಟೇಶ್ ಮಾನ್ವಿ, ಶಿವಯೋಗಿ ಗಡ್ಡದ್ದೇವರಮಠ, ವಿಜಯ ಬೂದಿಹಾಳ, ಈರಣ್ಣ ಅಕ್ಕೂರ ಹಾಜರಿದ್ದರು.



ಶಿರಹಟ್ಟಿ ತಾಲೂಕಿನ ಸುಗ್ನಳ್ಳಿ ಗ್ರಾಮದ ಸಾವಯವ ಕೃಷಿಕ ಬಸವರಾಜ ನಾವಿ ಅವರು ಸಾವಯವ ಕೃಷಿಯಲ್ಲಿ ಸಾಧಿಸಿದ ಪ್ರಗತಿಯನ್ನು ಪರಿಗಣಿಸಿ ತಮಿಳುನಾಡಿನ ಕೃಷಿ ಸಂಶೋಧನಾ ವಿವಿ ಗೌರವ ಡಾಕ್ಟರೇಟ್ ನೀಡಿ ಗೌರವಿಸಿದ ಹಿನ್ನೆಲೆಯಲ್ಲಿ, ಲಕ್ಷ್ಮೇಶ್ವರ ತಾಲೂಕಾ ಹಡಪದ ಅಪ್ಪಣ್ಣ ಸಮಾಜದ ವತಿಯಿಂದ ಬಸವರಾಜ ನಾವಿ ದಂಪತಿಗಳನ್ನು ಸನ್ಮಾನಿಸಲಾಯಿತು. ಗುಡ್ಡಪ್ಪ ಹಡಪದ, ಶರಣಪ್ಪ ಹಡಪದ, ಸೋಮಣ್ಣ ಹಡಪದ, ಹನುಮಂತಪ್ಪ ನಾವಿ, ಮುತ್ತಣ್ಣ ನಾವಿ, ನಿಂಗಪ್ಪ ಹಡಪದ, ನಾಗರಾಜ ಹಡಪದ, ಗುರುರಾಜ ಹಡಪದ, ಮಂಜುನಾಥ ಹಡಪದ ಇದ್ದರು.

### ಉದ್ಯೋಗ ಖಾತ್ರಿ ರಥಕ್ಕೆ ಚಾಲನೆ ನೀಡಿದ ಶಾಸಕ ಜಿ.ಎಸ್ ಪಾಟೀಲ

# ಬರಕ್ಕೆ ಯಾರೂ ಹೆದರುವ ಅಗತ್ಯವಿಲ್ಲ

■ ವಿಜಯಸಾಕ್ಷಿ ಸುದ್ದಿ, ರೋಣ

ಗ್ರಾಮೀಣ ಭಾಗದ ಜನರ ಬದುಕಿಗೆ ಭರವಸೆಯಾಗಿ ನರೇಗಾ ಯೋಜನೆ ಸಹಕಾರಿಯಾಗಿದೆ. ಈ ಬಾರಿ ನಮ್ಮ ಭಾಗದಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ಮಳೆ ಆಗದ ಕಾರಣ ಬರ ಆವರಿಸಿದೆ. ಬರಕ್ಕೆ ಯಾರೂ ಹೆದರುವ ಅಗತ್ಯವಿಲ್ಲ. ನಮ್ಮ ಸರ್ಕಾರ ಯುದ್ಧೋಪಾದಿಯಲ್ಲಿ ಹೋರಾಡಲು ಸಜ್ಜಾಗಿದೆ. ನರೇಗಾ ಯೋಜನೆಯಡಿ 150 ಮಾನವ ದಿನಗಳ ಸೃಜನೆ ಮಾಡಲು ಅವಕಾಶ ಕೊಡುವ ಕುರಿತು ಸರ್ಕಾರದ ಹಂತದಲ್ಲಿ ಚರ್ಚೆ ನಡೆಸಲಾಗುತ್ತಿದೆ ಎಂದು ರೋಣ ಮತಕ್ಷೇತ್ರದ ಶಾಸಕರಾದ ಜಿ.ಎಸ್ ಪಾಟೀಲ ನುಡಿದರು.

ರೋಣ ತಾ.ಪಂ ಆವರಣದಲ್ಲಿ ಉದ್ಯೋಗ ಖಾತ್ರಿ ರಥಕ್ಕೆ ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.

ನಮ್ಮ ಕೈಗಳಿಗೆ ಉದ್ಯೋಗ ಬೇಕು ಎಂಬ ಉದ್ದೇಶದಿಂದ ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ ರಾಜ್ ಇಲಾಖೆಯು ಈ ಕಾರ್ಯವನ್ನು ಹಮ್ಮಿಕೊಂಡಿದೆ. ಆ ದಿಸೆಯಲ್ಲಿ ಯೋಜನೆಯ ಬಗ್ಗೆ ಅಧಿಕಾರಿಗಳು ಸಾಕಷ್ಟು ತಿಳುವಳಿಕೆ ಇಟ್ಟುಕೊಂಡು ಕೆಲಸ ಮಾಡಬೇಕಾಗುತ್ತದೆ ಎಂದು ಹೇಳಿದರು.




ಇದಕ್ಕೂ ಮುನ್ನ ಮಾತನಾಡಿದ ರೋಣ ತಾ.ಪಂ ಕಾರ್ಯನಿರ್ವಾಹಕ ಅಧಿಕಾರಿ ರವಿ ಎ.ಎನ್, ಕಾಯಕವೇ ಕೈಲಾಸ ಎಂಬ ಬಸವಣ್ಣನವರ ಆಶಯದ ಆಧಾರದ ಮೇಲೆ ಈ ನರೇಗಾ ಯೋಜನೆ ಜಾರಿಗೆ ಬಂದಿದೆ. ಪ್ರತಿಯೊಬ್ಬರೂ ದುಡಿಯಬೇಕು, ದುಡಿದ ಹಣದಿಂದ ಬದುಕು ಸಾಗಿಸಬೇಕು ಎಂಬ ಉದ್ದೇಶ ಇದರದ್ದಾಗಿದೆ.

ಸಮಾಜದ, ಭವಿಷ್ಯದ ದೃಷ್ಟಿ ಹಾಗೂ ರಾಷ್ಟ್ರದ ದೃಷ್ಟಿಯಿಂದ ಈ ಯೋಜನೆ ಲಾಭ ಪಡೆಯುತ್ತದೆ. ರಾಜ್ಯದಲ್ಲಿ ಗದಗ ಜಿಲ್ಲೆ ಮಾನವ ದಿನಗಳ ಸೃಜನೆ ಮಾಡುವ ನಿಟ್ಟಿನಲ್ಲಿ ರಾಜ್ಯದಲ್ಲಿಯೇ 2ನೇ ಸ್ಥಾನದಲ್ಲಿ ಇದೆ. ಈಲ್ಲೆಯಲ್ಲಿ ರೋಣ ತಾಲೂಕು ಮೊದಲು ಸ್ಥಾನದಲ್ಲಿ ಇದೆ ಎಂದರು.

ಕಾರ್ಯಕ್ರಮದಲ್ಲಿ ರೋಣ ತಾ.ಪಂ ಸಹಾಯಕ ನಿರ್ದೇಶಕ(ಗ್ರಾ.ಉ) ರಿಯಾಜ್ ಖತೀಬ್, ಸಹಾಯಕ ನಿರ್ದೇಶಕ (ಪಂಚಾಯತ್ ರಾಜ್) ಶಿವಯೋಗಿ ರಿತ್ತಿ, ಸಹಾಯಕ ನಿರ್ದೇಶಕರು ಅಕ್ಷರದಾಸೋಹ, ಆಇಇ ನೀರು ಮತ್ತು ನೈರ್ಮಲ್ಯ ಇಲಾಖೆ, ತಾಲೂಕಾ ಯೋಜನಾಧಿಕಾರಿಗಳು, ಕೃಷಿ, ತೋಟಗಾರಿಕೆ , ಪಿಆರ್‌ಡಿ ಇಂಜಿನಿಯರಿಂಗ್ ವಿಭಾಗದ ಅಧಿಕಾರಿಗಳು, ಇತರೆ ಅಧಿಕಾರಿಗಳು, ತಾಲೂಕಿನ ನರೇಗಾ ಸಿಬ್ಬಂದಿ ವರ್ಗ, ತಾ.ಪಂ ಸಿಬ್ಬಂದಿ ವರ್ಗ, ಜಕ್ಕಲಿ, ಇಟಗಿ ಮತ್ತು ಇತರೆ ಗ್ರಾಮಗಳ ಸದಸ್ಯರು, ಜನ ಪ್ರತಿನಿಧಿಗಳು ಮತ್ತು ಮುಖಂಡರು ಹಾಜರಿದ್ದರು. ಇದೇ ಸಂದರ್ಭದಲ್ಲಿ ರೋಣ ತಾ.ಪಂ ನರೇಗಾ ಸಿಬ್ಬಂದಿಗಳು ಶಾಸಕ ಜಿ.ಎಸ್ ಪಾಟೀಲರನ್ನು ಸನ್ಮಾನಿಸಿದರು.

2005ರಲ್ಲಿ ಅಂದಿನ ಪ್ರಧಾನಮಂತ್ರಿಗಳಾದ ಡಾ. ಮನಮೋಹನ ಸಿಂಗ್ ಅವರು ಈ ಕಾರ್ಯಕ್ರಮ ಅನುಷ್ಠಾನಕ್ಕೆ ತಂದರು. ರೈತ ಕಾರ್ಮಿಕರಿಗೆ, ರೈತ ಮಹಿಳೆಯರಿಗೆ ಈ ಕಾರ್ಯಕ್ರಮದ ತಿಳುವಳಿಕೆ ಬಂದಿದೆ. ಆದರೂ ಸಹ ಗ್ರಾಮೀಣ ಭಾಗದ ಜನರು ನೋಂದಣಿ ಮಾಡಿಕೊಳ್ಳವುದಿಲ್ಲ. ಇದರಿಂದ ಅಂತವರು ಉದ್ಯೋಗದಿಂದ ವಂಚಿತರಾಗುತ್ತಾರೆ. ಹೆಚ್ಚು ತಿಳುವಳಿಕೆ ಇಟ್ಟುಕೊಂಡು ಗ್ರಾಮ ಪಂಚಾಯಿತಿ ಕಚೇರಿಗೆ ಭೇಟಿ ನೀಡಿ, ನೋಂದಣಿ ಮಾಡಿಕೊಳ್ಳಬೇಕು.

**– ಜಿ.ಎಸ್ ಪಾಟೀಲ.**
ಶಾಸಕರು, ರೋಣ.

ಕೂಲಿಕಾರರಿಂದ ಕಾಮಗಾರಿ ಬೇಡಿಕೆಯನ್ನು ಪಡೆಯಲಾಗುತ್ತಿದೆ. ರೈತರಿಗೆ ಅನುಕೂಲವಾಗುವ ಕಾಮಗಾರಿಗಳನ್ನು ಪಂಚಾಯಿತಿಗೆ ಸಲ್ಲಿಸುವಂತೆ ಇದೀಗ ಉದ್ಯೋಗ ಖಾತ್ರಿ ರಥವೂ ತಾಲೂಕಿನ 22 ಗ್ರಾ.ಪಂ ವ್ಯಾಪ್ತಿಗಳಲ್ಲಿ ಸಂಚರಿಸಿ, ಯೋಜನೆಯಡಿ ಸಿಗುವ ಸೌಲಭ್ಯಗಳ ಬಗ್ಗೆ ವ್ಯಾಪಕ ಪ್ರಚಾರ ಕೈಗೊಳ್ಳಲಿದೆ. ಉದ್ಯೋಗ ಖಾತ್ರಿ ರಥದ ಪ್ರಚಾರವನ್ನು ತಾಲೂಕಿನ ಎಲ್ಲಾ ಕೂಲಿಕಾರ್ಮಿಕರು ಪಡೆಯಬೇಕೆಂದು ರವಿ ಎ.ಎನ್. ಮಾಹಿತಿ ನೀಡಿದರು.



## ಗ್ರಾಮ ದೇವತೆ ದೇವಸ್ಥಾನದಲ್ಲಿ ದೇವಿ ಪುರಾಣ ಆರಂಭ



■ ವಿಜಯಸಾಕ್ಷಿ ಸುದ್ದಿ, ಲಕ್ಕುಂಡಿ

ಒಂಬತ್ತು ದಿನಗಳ ಕಾಲ ನಡೆಯುವ ದೇವಿ ಪುರಾಣದಲ್ಲಿ ಬರುವ ತತ್ವೋಪದೇಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ಅಲ್ಲಮಪ್ರಭುದೇವರ ಮಠದ ಸಿದ್ಧಲಿಂಗೇಶ್ವರ ಸ್ವಾಮೀಜಿಗಳು ಹೇಳಿದರು.

ಇಲ್ಲಿಯ ಗ್ರಾಮದೇವತೆ ದೇವಸ್ಥಾನದಲ್ಲಿ ನವರಾತ್ರಿ ಅಂಗವಾಗಿ ಆರಂಭವಾದ 44ನೇ ವರ್ಷದ ದೇವಿ ಪುರಾಣವು ಘಟಸ್ಥಾಪನೆ ನೆರವೇರಿಸಿ ಉದ್ಘಾಟಿಸಿ ಮಾತನಾಡಿದರು.

ಗದಗ ವಾಸುದೇವ ಹೂಲಿ ಪುರಾಣ ಪ್ರವಚನ ಆರಂಭಿಸಿದರು. ಶ್ರೀಕಾಂತ ಬಡಿಗೇರ ಪಠಣ ಮಾಡಿದರು. ಶಂಕ್ರಪ್ಪ ಬಣವಿ, ಮಲ್ಲಪ್ಪ ಕಲ್ಲೂರ ಬಸನಗೌಡ ಪಾಟೀಲ ಸಂಗೀತ ಸೇವೆ ನೀಡಿದರು. ವಿರುಪಾಕ್ಷಗೌಡ ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ದತ್ತಾತ್ರೇಯ ಜೋಶಿ ಉಪಸ್ಥಿತರಿದ್ದರು. ಬಸವರಾಜ ಭೂಮಣ್ಣವರ ಸ್ವಾಗತಿಸಿದರು. ಪ್ರಕಾಶ ಅರಹುಣಶಿ ನಿರೂಪಿಸಿದರು.

## ಸಾಲಿಮಠರಿಗೆ ಪ್ರಧಾನ ಮಂತ್ರಿಗಳ ಅಭಿನಂದನಾ ಪತ್ರ

■ ವಿಜಯಸಾಕ್ಷಿ ಸುದ್ದಿ, ನರೇಗಲ್ಲ



ಗದಗನ ಶಿಕ್ಷಕರ ತರಬೇತಿ ಕೇಂದ್ರದಲ್ಲಿ ಉಪನ್ಯಾಸಕರಾಗಿರುವ ಕೆ.ಪಿ ಸಾಲಿಮಠರಿಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರಿಂದ ಅಭಿನಂದನಾ ಪತ್ರ ಬಂದಿದೆ.

ಮುಂದಿನ 25 ವರ್ಷಗಳಲ್ಲಿ ಭಾರತದ ಶಿಕ್ಷಣದ ಮಟ್ಟ ಹೇಗಿರಬೇಕು ಎಂಬ ವಿಷಯಕ್ಕೆ ಸಂಬಂಧಿಸಿದಂತೆ, ಶಾಲೆ-ಕಾಲೇಜುಗಳಲ್ಲಿ ಶಿಕ್ಷಕರು ತಮ್ಮ ಬೋಧನೆಯ ಜೊತೆಗೆ ನಮ್ಮ ಪರಂಪರೆ ಹಾಗೂ ಹೆಮ್ಮೆಯ ವಿಧಾನಗಳನ್ನು ಬಳಸುವ ಬಗ್ಗೆ ಪ್ರಬಂಧವನ್ನು ಪ್ರಧಾನ ಮಂತ್ರಿಗಳ 'ಪರೀಕ್ಷಾ ಪೆ ಚರ್ಚಾ' ಕಾರ್ಯಕ್ರಮಕ್ಕೆ ಪೂರಕವಾಗಿ ಆಹ್ವಾನಿಸಲಾಗಿತ್ತು.

ಈ ವಿಷಯಕ್ಕೆ ಸಂಬಂಧಿಸಿದ ಪ್ರಬಂಧವನ್ನು ಸಾಲಿಮಠರು ಇಂಗ್ಲೀಷ್‌ನಲ್ಲಿ ಬರೆದು ಮಂಡಿಸಿದ್ದರು. ಈ ಪ್ರಬಂಧವು ಶಾಲಾ ಕಾಲೇಜುಗಳಲ್ಲಿ ಶಿಕ್ಷಕರು ವಿದ್ಯಾರ್ಥಿಗಳಿಗೆ ಪರಿಣಾಮಕಾರಿಯಾಗಿ ಬೋಧನೆ ಮಾಡಲು ಬಳಸಬೇಕಾದ ಬೋಧನಾ ತಂತ್ರ ಮತ್ತು ಕೌಶಲ್ಯಗಳನ್ನು ಅಳವಡಿಸಿಕೊಳ್ಳುವುದು ಹೇಗೆ ಎಂಬ ವಿಷಯಗಳನ್ನು ಒಳಗೊಂಡಿತ್ತು.

ಸಾಲಿಮಠರು ಈ ಹಿಂದೆ ಇಟಗಿಯ ಆದರ್ಶ ವಿದ್ಯಾಲಯದ ಮುಖ್ಯೋಪಾಧ್ಯಾಯರಾಗಿ ಕಾರ್ಯ ನಿರ್ವಹಿಸುತ್ತಿದ್ದಾಗ ಸತತ ಎರಡು ವರ್ಷ ತಮ್ಮ ಶಾಲೆಯ ಮಕ್ಕಳು ಪ್ರಧಾನ ಮಂತ್ರಿಯವರ 'ಪರೀಕ್ಷಾ ಪೆ ಚರ್ಚಾ'ದಲ್ಲಿ ಭಾಗವಹಿಸುವಂತೆ ಮಾರ್ಗದರ್ಶನ ಮಾಡಿದ್ದರು. ಸಾಲಿಮಠರು ಪ್ರಧಾನ ಮಂತ್ರಿಗಳ ಅಭಿನಂದನಾ ಪತ್ರ ಪಡೆದದ್ದಕ್ಕೆ ನರೇಗಲ್ಲದ ಬೀಚಿ ಬಳಗ, ಅವರ ಸಹೋದ್ಯೋಗಿಗಳು, ಆಪ್ತರು, ಮಿತ್ರರು ಹರ್ಷ ವ್ಯಕ್ತಪಡಿಸಿ ಅವರನ್ನು ಅಭಿನಂದಿಸಿದ್ದಾರೆ.

## ಶ್ರೀ ಜಗದಂಬಾ ದೇವಸ್ಥಾನದಲ್ಲಿ ಉಡಿ ತುಂಬುವ ಕಾರ್ಯಕ್ರಮ

■ ವಿಜಯಸಾಕ್ಷಿ ಸುದ್ದಿ, ಗದಗ

ನವರಾತ್ರಿ ಉತ್ಸವದ ಅಂಗವಾಗಿ ಮುಳಗುಂದ ನಾಕಾ ಬಳಿಯ ಮರಾಠಾ ವಿದ್ಯಾವರ್ಧಕ ಸಂಘದ ಶ್ರೀ ಜಗದಂಬಾ ದೇವಸ್ಥಾನದಲ್ಲಿ ಅ.20ರಂದು ಸಾಯಂಕಾಲ 7 ಗಂಟೆಗೆ ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮ ಹಾಗೂ ಅನ್ನಸಂತರ್ಪಣೆ ಜರುಗಲಿದೆ.

ಮಹಾಪ್ರಸಾದ ಸೇವೆಯನ್ನು ಶ್ರೀ ಮೋಹನರಾವ್ ಯಲ್ಲಪ್ಪ ಗ್ವಾರಿ ಸಹೋದರರು ವಹಿಸಿಕೊಂಡಿದ್ದಾರೆ. ಈ ಧಾರ್ಮಿಕ ಕಾರ್ಯಕ್ರಮಕ್ಕೆ ಸಮಾಜ ಬಾಂಧವರು, ಮಹಿಳೆಯರು, ಭಕ್ತಾದಿಗಳು, ಅಧಿಕ ಸಂಖ್ಯೆಯಲ್ಲಿ ಆಗಮಿಸಿ ದೇವಿ ಕೃಪೆಗೆ ಪಾತ್ರರಾಗಬೇಕೆಂದು ಸಂಘದ ಅಧ್ಯಕ್ಷ ವಿನೀತಕುಮಾರ ವ್ಹಿ.ಜಗತಾಪ, ಗೌರವ ಕಾರ್ಯದರ್ಶಿ ಶಿವಾಜಿ ವಾಯ್. ಗ್ವಾರಿ ಪ್ರಕಟಣೆಯಲ್ಲಿ ವಿನಂತಿಸಿದ್ದು, ನವರಾತ್ರಿ ಅಂಗವಾಗಿ ಶ್ರೀದೇವಿ ಪುರಾಣ ಪ್ರವಚನದ ನಂತರ ಭಕ್ತಾದಿಗಳಿಗೆ ದಿನನಿತ್ಯ ಪ್ರಸಾದ ವಿತರಣೆಯನ್ನು ಮಾಡುತ್ತಿರುವ ಸಮಾಜದ ಹಿರಿಯರಾದ ಪರಶುರಾಮ ಯಲ್ಲಪ್ಪ ಜಾಧವ, ವಿನೀತಕುಮಾರ ಜಗತಾಪ, ಮಾರುತಿರಾವ್ ರಾ.ಅರಳಿಕಟ್ಟಿ ಹಾಗೂ ಪಾಲಕಿ ಸೇವಾ ಸಮಿತಿ ಇವರುಗಳಿಗೆ ಕೃತಜ್ಞತೆಗಳನ್ನು ಸಲ್ಲಿಸಿದ್ದಾರೆ.

## ಶ್ರೀ ದ್ಯಾಮಮ್ಮ ದೇವಿಗೆ ವಿಶೇಷ ಪೂಜೆ



■ ವಿಜಯಸಾಕ್ಷಿ ಸುದ್ದಿ, ಗದಗ

ಸಮಿಪದ ತಿಮ್ಮಾಪೂರ ಗ್ರಾಮದಲ್ಲಿ ದಸರಾ ಹಬ್ಬದ ಅಂಗವಾಗಿ ದ್ಯಾಮಮ್ಮ ದೇವಿಗೆ ವಿಶೇಷ ಪೂಜೆ ಹಾಗೂ ಹವನ ಕಾರ್ಯಕ್ರಮಗಳು ನಡೆದವು.

ಹುಬ್ಬಳ್ಳಿಯ ಪಂ. ಗಂಗಾಧರ ಭಟ್ಟಶಾಸ್ತ್ರೀ ಹಾಗೂ ಸಂಗಡಿಗರು ಅಶ್ವತ್ಥನಾರಾಯಣ ಹೋಮವನ್ನು ಸಂಪನ್ನಗೊಳಿಸಿದರು. ಮುತ್ತೈದೆಯರು ದೇವಿಗೆ ಉಡಿ ತುಂಬುವ ಮೂಲಕ ಭಕ್ತಿ ಸೇವೆ ಸಲ್ಲಿಸಿದರು. ಮಧ್ಯಾಹ್ನ ಮಹಾ ಅನ್ನಸಂತರ್ಪಣೆ ಕಾರ್ಯಕ್ರಮದಲ್ಲಿ ಗ್ರಾಮದ ಹಿರಿಯರಾದ ರಾಮನಗೌಡ ದೇಸಾಯಿ, ಸಂಗಪ್ಪ ಮಳ್ಳಿ, ಯಲ್ಲಪ್ಪ ಎಚ್.ಬಾಬರಿ, ಶರಣಪ್ಪ ಜೋಗಿನ, ಬಸಪ್ಪ ಸತ್ಯಪ್ಪನವರ, ಚಿನ್ನಪ್ಪ ಬಿಸನಳ್ಳಿ, ಶೇಖಪ್ಪ ಪೂಜಾರ, ರಮೇಶ ಜೋಗಿನ, ಅಚ್ಚಕಾರದ ಬಸಪ್ಪ ಬಡಿಗೇರ, ಮಂಜು ಬಡಿಗೇರ ಮುಂತಾದವರು ಪಾಲ್ಗೊಂಡಿದ್ದರು.

## ವಾಣಿಜ್ಯ, ಕೈಗಾರಿಕೆಗಳ ಸಂಘದ ಪಧಾಧಿಕಾರಿಗಳಿಗೆ ಸನ್ಮಾನ



■ ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕೆಗಳ ಸಂಘಕ್ಕೆ ನೂತನವಾಗಿ ಅಧ್ಯಕ್ಷ ಈಶ್ವರಪ್ಪ ಮುನವಳ್ಳಿ ಹಾಗೂ ಕಾರ್ಯದರ್ಶಿ ಪ್ರಕಾಶ ಉಗಲಾಟ ಅವರನ್ನು ರೋಟರಿ ಸಂಸ್ಥೆ ಗದಗ-ಬೆಟಗೇರಿಯ ಸಾಪ್ತಾಹಿಕ ಸಭೆಯಲ್ಲಿ ಸನ್ಮಾನಿಸಲಾಯಿತು.

ಸನ್ಮಾನ ಸ್ವೀಕರಿಸಿದ ಈಶ್ವರಪ್ಪ ಮುನವಳ್ಳಿ ಮಾತನಾಡಿ, ಗದಗ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕೆಗಳ ಸಂಘವು ವ್ಯಾಪಾರಸ್ಥರ ಹಾಗೂ ಕೈಗಾರಿಕೋದ್ಯಮಿಗಳ ಕುಂದು-ಕೊರತೆಯನ್ನು ನಿವಾರಿಸುವುದರೊಂದಿಗೆ, ರೋಟರಿ ಸಂಸ್ಥೆಯೊಂದಿಗೆ ಸೇರಿ ಸಾಮಾಜಿಕ, ವೈದ್ಯಕೀಯ ಸೇವೆಗಳನ್ನು ಹಮ್ಮಿಕೊಳ್ಳಲಾಗುವುದು ಎಂದರು.

ಪ್ರಕಾಶ ಉಗಲಾಟ ಮಾತನಾಡಿದರು. ಸಂಸ್ಥೆಯ ಅಧ್ಯಕ್ಷ ರೊ. ಚಂದ್ರಮೌಳಿ ಜಾಲಿ ಸ್ವಾಗತಿಸಿದರು. ಶ್ರೀಧರ ಧರ್ಮಾಯತ, ವಿಶ್ವನಾಥ ಯಳಮಲಿ ಅತಿಥಿಗಳನ್ನು ಪರಿಚಯಿಸಿದರು. ರೋಟರಿ ಸಂಸ್ಥೆಯ ಸದಸ್ಯ ರೊ. ಡಾ. ಆರ್.ಬಿ ಉಪ್ಪಿನ, ಅಕ್ಷಯ ಶೆಟ್ಟಿ, ಸಂತೋಷ ಅಕ್ಕಿ, ಡಾ. ರಾಜಶೇಖರ ಬಳ್ಳಾರಿ, ಆರ್. ಎಸ್ ಇಟಗಿ, ಡಾ. ಕಿಶೋರ ರೇವಣಕರ, ಕಮಲಾಕ್ಷಿ ಅಂಗಡಿ, ಸುರೇಶ ಕುಂಬಾರ, ಶ್ರೀಧರ ಸುಲ್ತಾನಪೂರ, ಡಾ. ಪ್ರದೀಪ ಉಗಲಾಟ, ಶೈಲೇಂದ್ರ ಬಿರಾದಾರ, ಪಂಕಜ ಕುಂಬಾರ, ಆರ್.ಎಸ್ ಬುರಡಿ, ಚನ್ನವೀರಪ್ಪ ಹುಣಶಿಕಟ್ಟಿ, ಹೆಚ್.ಎಸ್ ಪಾಟೀಲ, ಡಾ. ಆರ್.ಕೆ ಗಚ್ಚಿನಮಠ, ರೋಟರ್‍ಯಾಕ್ಟ್ ಸದಸ್ಯ ವಿಶ್ವಾಸ ಕೊಪ್ಪಳ ಮುಂತಾದವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಸಂಸ್ಥೆಯ ಕಾರ್ಯದರ್ಶಿ ವೀಣಾ ತಿರ್ಲಾಪೂರ ನಿರೂಪಿಸಿ ವಂದಿಸಿದರು.

## ಪ್ರಸಕ್ತ ಆರ್ಥಿಕ ವರ್ಷದಲ್ಲಿ 1.36 ಲಕ್ಷ ಕೋಟಿ ಜಿಎಸ್‌ಟಿ ವಂಚನೆ

■ ವಿಜಯಸಾಕ್ಷಿ ಸುದ್ದಿ, ನವದೆಹಲಿ

2023-24ರ ಆರ್ಥಿಕ ವರ್ಷದಲ್ಲಿ ಸುಮಾರು 1.36 ಲಕ್ಷ ಕೋಟಿ ರೂಪಾಯಿ ತೆರಿಗೆ ವಂಚನೆಯನ್ನು ಆರ್ಥಿಕ ಇಲಾಖೆ ಪತ್ತೆ ಮಾಡಿದೆ ಎಂದು ಸರ್ಕಾರದ ಹೇಳಿಕೆ ತಿಳಿಸಿದೆ. ವಂಚನೆ ಪತ್ತೆಯಾದ ಬಳಿಕ ಸ್ವಯಂ ಪ್ರೇರಿತವಾಗಿ 14,108 ಕೋಟಿ ತೆರಿಗೆ ಪಾವತಿಸಿದ್ದಾರೆ ಎಂದು ತಿಳಿದು ಬಂದಿದೆ.

## ರಾಜ್ಯ ಮಟ್ಟಕ್ಕೆ ಆಯ್ಕೆ



■ ವಿಜಯಸಾಕ್ಷಿ ಸುದ್ದಿ, ಗದಗ

ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ 800 ಮೀಟರ್ ಓಟದಲ್ಲಿ ಕುರ್ತಕೋಟಿ ಹುಲಕೋಟಿ ಸಹಕಾರಿ ಶಿಕ್ಷಣ ಸಂಸ್ಥೆಯ ಮನೋಹರ ಅಮರಪ್ಪ ಇನಾಮತಿ ಪ್ರೌಢಶಾಲೆಯ ವಿದ್ಯಾರ್ಥಿ ಮಕ್ತುಮ್ ದೊಡ್ಡಮನಿ ಪ್ರಥಮ ಸ್ಥಾನ ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿದ್ದಾನೆ.

ವಿದ್ಯಾರ್ಥಿಯ ಕ್ರೀಡಾ ಸಾಧನೆಗೆ ಹಾಗೂ ತರಬೇತಿ ನೀಡಿದ ದೈ.ಶಿ ಎಮ್.ಎಚ್ ಅಂಗಡಿ ಇವರಿಗೆ ಸಂಸ್ಥೆಯ ಅಧ್ಯಕ್ಷ ಆರ್.ಎಂ ಮೂಲಿಮನಿ, ಆಡಳಿತಾಧಿಕಾರಿ ಆರ್.ಎಸ್ ಪಾಟೀಲ, ಸ್ಥಾನಿಕ ಆಡಳಿತ ಮಂಡಳಿಯ ಅಧ್ಯಕ್ಷ ಯು.ವಿ ಬೆಟಗೇರಿ, ಅಪ್ಪಣ್ಣ ಎ.ಇನಾಮತಿ ಹಾಗೂ ಸದಸ್ಯರು, ಮುಖ್ಯೋಪಾಧ್ಯಾಯ ಜಂಬುನಾಥ ಹರಿವಾಣ, ಶಿಕ್ಷಕ/ಸಿಬ್ಬಂದಿ ವರ್ಗದವರು ಅಭಿನಂದನೆ ಸಲ್ಲಿಸಿದ್ದಾರೆ.

### ಶಿವಾನುಭವ ಕಾರ್ಯಕ್ರಮದಲ್ಲಿ ಭೈರನಹಟ್ಟಿ ಶಾಂತಲಿಂಗ ಶ್ರೀಗಳು

# ಕಾಯಕದಲ್ಲಿ ಕೈಲಾಸ ಕಾಣಬೇಕು

■ ವಿಜಯಸಾಕ್ಷಿ ಸುದ್ದಿ, ಗದಗ

ತರಕಾರಿ, ಹಣ್ಣು, ಧವಸದಾನ್ಯಗಳನ್ನು ತಯಾರಿಸುವ ವಿಜ್ಞಾನಿಗಳು ಯಾರೂ ಇಲ್ಲ. ಅದು ರೈತನಿಂದ ಮಾತ್ರ ಸಾಧ್ಯ. ಕಾಯಕದಲ್ಲಿ ಕೈಲಾಸ ಕಾಣಬೇಕು. ಕಾಯಕ ಮಾಡದೇ ಪ್ರಸಾದ ಸ್ವೀಕರಿಸಬಾರದು ಎಂಬ ಶರಣರ ವಾಣಿಯನ್ನು ಪಾಲಿಸಬೇಕು ಎಂದು ಭೈರನಹಟ್ಟಿ ಶಾಂತಲಿಂಗ ಶ್ರೀಗಳು ಹೇಳಿದರು.

ಲಿಂಗಾಯತ ಪ್ರಗತಿಶೀಲ ಸಂಘದ ಶಿವಾನುಭವ ಕಾರ್ಯಕ್ರಮದ ಸಮ್ಮುಖ ವಹಿಸಿ ಮಾತನಾಡಿದ ಶ್ರೀಗಳು, ಆಹಾರ ಮನುಷ್ಯನಿಗೆ ಬಹಳ ಆವಶ್ಯ. ಪ್ರತಿದಿವಸ ಹಸಿವಿನಿಂದ ಬಳಲುವ ಜನರಿದ್ದಾರೆ. ಮತ್ತೊಂದು ಕಡೆ, ಊಟವನ್ನು ಕರಗಿಸಲು ಪ್ರಯತ್ನಿಸುವ ಶ್ರೀಮಂತರೂ ಇದ್ದಾರೆ. ಪ್ರಸ್ತುತ ದಿನಮಾನದಲ್ಲಿ ತಟ್ಟೆಯಲ್ಲಿ ಆಹಾರ ಬಿಡುವುದು ಒಂದು ರೂಢಿಯಾಗಿದೆ. ಆಹಾರವನ್ನು ಎಂದಿಗೂ ಕೆಡಿಸಬಾರದು.




12ನೇ ಶತಮಾನದಲ್ಲಿ ಬಸವಾದಿ ಶಿವಶರಣರು ಊಟಕ್ಕೆ ಪ್ರಸಾದ ಎಂದಿದ್ದಾರೆ. ಪ್ರಸಾದದ ಬಗ್ಗೆ ಶರಣರಿಗೆ ಬಹಳಷ್ಟು ಪ್ರಜ್ಞೆ ಇತ್ತು ಎಂದು ಅಭಿಪ್ರಾಯಪಟ್ಟರು.

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕ ಸುರೇಶ ಕುಂಬಾರ ಉಪನ್ಯಾಸ ನೀಡಿ, ಬೆಳೆಯುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ಆಹಾರದ ಉತ್ಪಾದನೆಯಾಗಬೇಕು. ಇಲ್ಲದಿದ್ದರೆ ಆಹಾರಕ್ಷಾಮ ಉಂಟಾಗುತ್ತದೆ. ಕರ್ನಾಟಕ ಕೃಷಿಯಲ್ಲಿ ಸಮೃದ್ಧವಾಗಿದೆ. ವೈವಿಧ್ಯಮಯವಾದ ಬೆಳೆಗಳನ್ನು ಬೆಳೆಯುತ್ತಿದ್ದೇವೆ ಎಂದರಲ್ಲದೆ, ಆಹಾರ ಉತ್ಪಾದನೆಯಲ್ಲಿ ಎಮ್. ಎಸ್ ಸ್ವಾಮಿನಾಥನ್, ಕುರಿಯನ್ ಹೀಗೆ ಅನೇಕ ಮಹನೀಯರ ಕೊಡುಗೆಗಳನ್ನು ಸವಿಸ್ತಾರವಾಗಿ ಜನತೆಗೆ ತಿಳಿಸಿಕೊಟ್ಟರು.

ಮೃತ್ಯುಂಜಯ ಹಿರೇಮಠ ಹಾಗೂ ಗುರುನಾಥ ಸುತಾರ ತಂಡದವರು ವಚನ ಸಂಗೀತ ಹಾಡಿದರು. ತೈಬಾ ಎಂ.ನಾಗನೂರ ಧರ್ಮಗ್ರಂಥ ಪಠಣಗೈದರು, ಸಮೀರ ಎನ್.ನಾಗನೂರ ಇವರಿಂದ ವಚನ ಚಿಂತನ ನಡೆಯಿತು. ಶಿವಾನುಭವ ಭಕ್ತಿಸೇವೆಯನ್ನು ಶ್ರೀ ಜಗದ್ಗುರು ತೋಂಟದಾರ್ಯ ವಿದ್ಯಾಪೀಠದ ಐಟಿಐ ಕಾಲೇಜುಗಳ ಸಿಬ್ಬಂದಿವರ್ಗ ವಹಿಸಿದ್ದರು. ಸಂಘದ ಅಧ್ಯಕ್ಷ ಶೇಖಣ್ಣ ಕಳಸಾಪೂರ ಸ್ವಾಗತಿಸಿದರು. ರತ್ನಕ್ಕ ಪಾಟೀಲ ಕಾರ್ಯಕ್ರಮ ನಿರೂಪಿಸಿದರು. ಉಪಾಧ್ಯಕ್ಷ ಬಾಲಚಂದ್ರ ಭರಮಗೌಡರ, ರೇಣುಕಾ ವಿ.ಕರೇಗೌಡ್ರ, ಕಾರ್ಯದರ್ಶಿ ಮಹೇಶ ಗಾಣಿಗೇರ, ಸಹಕಾರ್ಯದರ್ಶಿ ವಿಜಯಕುಮಾರ ಹಿರೇಮಠ, ವಿರುಪಾಕ್ಷಪ್ಪ ಅರಳಿ, ಸಂಘಟನಾ ಕಾರ್ಯದರ್ಶಿ ಅಶೋಕ ಹಾದಿ, ಕೋಶಾಧ್ಯಕ್ಷ ಸುರೇಶ ನಿಲೂಗಲ್, ಶಿವಾನುಭವ ಸಮಿತಿ ಚೇರಮನ್ ವಿವೇಕಾನಂದಗೌಡ ಪಾಟೀಲ ಉಪಸ್ಥಿತರಿದ್ದರು.

ಒಂದು ಅಗಳು ಅನ್ನದ ಹಿಂದೆ ಸಾಕಷ್ಟು ಜನರ ಶ್ರಮವಿರುತ್ತದೆ. ಶಿವಶರಣರು ಅನ್ನದೇವರ ಮುಂದೆ ಇನ್ನು ದೇವರುಂಟೆ? ಎಂದು ಹೇಳಿದ್ದಾರೆ. ಆಹಾರದ ಬಗ್ಗೆ ಬಹಳಷ್ಟು ಭಕ್ತಿ, ಶ್ರದ್ಧೆ, ಗೌರವವನ್ನು ತಂದುಕೊಟ್ಟವರು ಶರಣರು. ಆಹಾರದಲ್ಲಿ ಔಷಧಿಯ ಗುಣಗಳಿದ್ದು, ಮನುಷ್ಯನಿಗೆ ಆಹಾರ ಔಷಧಿಯಾಗಬೇಕು, ಔಷಧಿಯೇ ಆಹಾರವಾಗಬಾರದು. ನಮ್ಮ ಗುರುಗಳಾದ ಡಾ. ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳು ಡಂಬಳದಲ್ಲಿ ಸ್ವತಃ ಬೆವರು ಸುರಿಸಿ ಬಾವಿ ತೋಡಿ ಕೃಷಿ ಮಾಡಿದ್ದಾರೆ. ಶ್ರೀಗಳು ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಕೃಷಿ ಹೀಗೆ ಅನೇಕ ಕ್ಷೇತ್ರಗಳಲ್ಲಿ ಶ್ರೀಮಠವನ್ನು ಬೆಳೆಸಿದ್ದಾರೆ.

**– ಭೈರನಹಟ್ಟಿ ಶಾಂತಲಿಂಗ ಶ್ರೀಗಳು.**

VIJAYA SAKSHI KANNADA DAILY MORNING Editor, Printer, Publisher, & Owned by : Hussainsab M. Shareefanavar, H.No. 130/154, Balaji Nagar, Near Ring Road, Gadag-582103, Dist : Gadag- Karnataka Printed at : Sai Printing Press, Near Joda Maruti Temple, Gadag-582101, Dist : Gadag- Karnataka